64	ರಾಮಪುರ	30	40	100000	120000	120000	110000	130000	130000	195000	208000
65	ಲಿಂಗಾಪುರ	30	40	100000	120000	120000	110000	130000	130000	195000	208000
66	ವೇಮಗಲ್	100	150	400000	400000	400000	450000	450000	450000	675000	720000
67	ವೀರಾಪುರ	30	40	100000	120000	120000	110000	130000	130000	195000	208000
68	ವೀರೇನಹಳ್ಳಿ	30	40	100000	120000	120000	110000	130000	130000	195000	208000
69	ಉರಟ ಅಗ್ರಹಾರ	30	40	250000	250000	250000	260000	260000	260000	390000	416000
70	ಸೀತಿ	30	40	150000	150000	150000	160000	160000	160000	240000	256000
71	ಸಿಂಗೇಹಳ್ಳಿ	30	40	250000	250000	250000	260000	260000	260000	390000	416000
72	ಶೆಟ್ಟಿಹಳ್ಳಿ	30	40	150000	180000	180000	160000	200000	200000	300000	320000
73	ಶೀತವಲ್ಲಿ	30	40	100000	120000	120000	110000	130000	130000	195000	208000
74	ಸೀತಿಹೊಸೂರು	30	40	150000	150000	150000	160000	160000	160000	240000	256000
75	ಸುಜ್ಜನಹಳ್ಳಿ	60	70	300000	300000	300000	330000	330000	330000	495000	528000
76	ಸುಳದೇನಹಳ್ಳಿ	30	40	120000	150000	150000	130000	160000	160000	240000	256000
77	ಹಾರ್ಜೇನಹಳ್ಳಿ	50	60	150000	150000	150000	160000	160000	160000	240000	256000
78	ಹುಲ್ಲಂಕಲ್ಲು	30	40	150000	180000	180000	160000	200000	200000	300000	320000
79	ಹೋಲೇರಹಳ್ಳಿ	30	40	100000	120000	120000	110000	130000	130000	195000	208000
80	ಚಂದ್ರಶೇಖರಪುರ	30	40	100000	120000	120000	110000	130000	130000	195000	208000

1	2	3	5	6	7	8	10	11	12	13	14
	ನರಸಾಪುರ ಹೋಬಳಿ										
1	ಅಪ್ಪಸಂದ್ರ	30	40	250000	250000	250000	260000	260000	260000	390000	416000
2	ಅಚ್ಚಟ್ನಹಳ್ಳಿ	50	60	250000	250000	250000	260000	260000	260000	390000	416000
3	ಖಾಜಿಕಲ್ಲಹಳ್ಳಿ,	50	60	400000	400000	400000	440000	440000	440000	660000	704000
4	ಖಾಜಿಕಲ್ಲಹಳ್ಳಿ, ಎನ್.ಹೆಚ್.	80	90	2000000	2000000	2000000	2200000	2200000	2200000	3300000	3520000
5	ಕುರ್ಕಿ ಹೈವೇ ಇಬ್ಬದಿ	80	90	2000000	2000000	2000000	2200000	2200000	2200000	3300000	3520000
6	ಕುರ್ಕಿ	50	60	400000	400000	400000	440000	440000	440000	660000	704000
7	ಕಲ್ವ	30	40	150000	180000	180000	160000	200000	200000	300000	320000
8	ಕೃಷ್ಣಾಪುರ (ಚಿಕ್ಕಂಡಹಳ್ಳಿ)	50	60	400000	400000	400000	440000	440000	440000	660000	704000
9	ಕೃಷ್ಣಾಪುರ ಎನ್.ಹೆಚ್.			2000000	2000000	2000000	2200000	2200000	2200000	3300000	3520000
10	ಕಲ್ಕರೆ	30	40	150000	180000	180000	160000	200000	200000	300000	320000
11	ಕರಡುಬಂಡೆ ಹೊಸಹಳ್ಳಿ	50	60	250000	250000	250000	260000	260000	260000	390000	416000
12	ಗುಟ್ಟಹಳ್ಳಿ	30	40	150000	180000	180000	160000	200000	200000	300000	320000
13	ಗರುಡಪಾಳ್ಯ	30	40	150000	150000	150000	160000	160000	160000	240000	256000
14	ಚೌಡದೇನಹಳ್ಳಿ	30	40	250000	250000	250000	260000	260000	260000	390000	416000
15	ಚಾಕರಸನಹಳ್ಳಿ	30	40	400000	400000	400000	440000	440000	440000	660000	704000

1	2	3	5	6	7	8	10	11	12	13	14
16	ಚಾಕರಸನಹಳ್ಳಿ ಎನ್.ಹೆಚ್	80	90	2000000	2000000	2000000	2200000	2200000	2200000	3300000	3520000
17	ಚಿಕ್ಕವಲ್ಲಬ್ಬಿ	30	40	150000	180000	180000	160000	200000	200000	300000	320000
18	ಚೊಕ್ಕಪುರ	30	40	150000	180000	180000	160000	200000	200000	300000	320000
19	ದೊಡ್ಡವಲ್ಲಬ್ಬಿ	30	40	150000	180000	180000	160000	200000	200000	300000	320000
20	ದಾನವಹಳ್ಳಿ	30	40	120000	150000	150000	130000	160000	160000	240000	256000
21	ದಿನ್ನೆಯ ಹೊಸಹಳ್ಳಿ	30	40	200000	200000	200000	220000	220000	220000	330000	352000
22	ನರಸಾಪುರ	80	90	600000	600000	600000	660000	660000	660000	990000	1056000
23	ನರಸಾಪುರ (ಹೈವೇ ಇಬ್ಬದಿ)	100	110	2500000	2500000	2500000	2800000	2800000	2800000	4200000	4480000
24	ಪರಪ್ಪನಹಳ್ಳಿ	30	40	100000	120000	120000	110000	130000	130000	195000	208000
25	ಬೆಟ್ಟಹೊಸಪುರ	50	60	250000	250000	250000	260000	260000	260000	390000	416000
26	ಬೆಳ್ಳೂರು(ಹೈವೇ ಇಬ್ಬದಿ)	100	110	2500000	2500000	2500000	2800000	2800000	2800000	4200000	4480000
26ಎ	ಬೆಳ್ಳೂರು	60	70	600000	600000	600000	660000	660000	660000	990000	1056000
27	ಬೈರಸಂದ್ರ	30	40	400000	400000	400000	440000	440000	440000	660000	704000
27ಎ	ಬೈರಸಂದ್ರ ಎನ್.ಹೆಚ್.	80	90	2500000	2500000	2500000	2800000	2800000	2800000	4200000	4480000
28	ಮಲ್ಲಸಂದ್ರ	30	40	150000	150000	150000	160000	160000	160000	240000	256000
29	ಯಂಡ್ರಕಾಯ್ಲುಪುರ	30	40	200000	200000	200000	220000	220000	220000	330000	352000

1	2	3	5	6	7	8	10	11	12	13	14
30	ರಾಮಭದ್ರಪುರ	30	40	300000	300000	300000	330000	330000	330000	495000	528000
30ಎ	ರಾಮಭದ್ರಪುರ (ಎನ್.ಹೆಚ್–4)	80	90	2500000	2500000	2500000	2800000	2800000	2800000	4200000	4480000
31	ರಾಮಸಂದ್ರ	30	40	300000	300000	300000	330000	330000	330000	495000	528000
32	ರಾಮಸಂದ್ರ ಎನ್.ಹೆಚ್	80	90	2500000	2500000	2500000	2800000	2800000	2800000	4200000	4480000
33	ಲಕ್ಷ್ಮೀಸಾಗರ	30	40	250000	250000	250000	260000	260000	260000	390000	416000
34	ಸೊಣ್ಣೇಹಳ್ಳಿ	30	40	200000	200000	200000	220000	220000	220000	330000	352000
35	ಉದ್ದಪನಹಳ್ಳಿ (ಹೈವೇ ಇಬ್ಬದಿ)	50	60	2500000	2500000	2500000	2800000	2800000	2800000	4200000	4480000
35ಎ	ಉದ್ದಪನಹಳ್ಳಿ	50	60	300000	300000	300000	330000	330000	330000	495000	528000
	ವಕ್ಕಲೇರಿ ಹೋಬಳಿ										
1	ಅರಾಭಿಕೊತ್ತನೂರು (ಹೈವೇಇಬ್ಬದಿ)	80	90	2000000	2000000	2000000	2300000	2300000	2300000	3450000	3680000
2	ಅರಾಬಿಕೊತ್ತನೂರು	50	60	300000	300000	300000	330000	330000	330000	495000	528000
3	ಅರಾಭಿಕೊತ್ತನೂರು ಮೆಟ್ರೋ	150	160							0	0
4	ಆಲಹಳ್ಳಿ	30	40	120000	150000	150000	130000	160000	160000	240000	256000
5	ಕೋಡಿಹಳ್ಳಿ	30	40	150000	180000	180000	160000	200000	200000	300000	320000
6	ಕಪರಸಿದ್ದನಹಳ್ಳಿ	50	60	350000	350000	350000	400000	400000	400000	600000	640000

1	2	3	5	6	7	8	10	11	12	13	14
7	ಕಪರಸಿದ್ದನಹಳ್ಳಿ ಎನ್.ಹೆಚ್	80	90	2000000	2000000	2000000	2300000	2300000	2300000	3450000	3680000
8	ಕೋನೇಪುರ	30	40	150000	180000	180000	160000	200000	200000	300000	320000
9	ಕೆಂದಟ್ಟಿ ಹೈವೇ ಇಬ್ಬದಿ	80	90	2000000	2000000	2000000	2300000	2300000	2300000	3450000	3680000
10	ಕೆಂದಟ್ಟಿ	50	60	300000	300000	300000	330000	330000	330000	495000	528000
11	ಕೆಂದಟ್ಟಿ ಗೊಲ್ಲಹಳ್ಳಿ(ಹೈವೆ)	80	90	2000000	2000000	2000000	2300000	2300000	2300000	3450000	3680000
12	ಕೆಂದಟ್ಟಿ ಗೊಲ್ಲಹಳ್ಳಿ	50	60	300000	300000	300000	330000	330000	330000	495000	528000
13	ಕೆಂದಟ್ಟಿ ಮಡಿವಾಳ	30	40	200000	200000	200000	220000	220000	220000	330000	352000
14	ಕೂತಾಂಡಹಳ್ಳಿ	30	40	100000	120000	120000	110000	130000	130000	195000	208000
15	ಕೋರಗಂಡಹಳ್ಳಿ	40	50	150000	180000	180000	160000	200000	200000	300000	320000
16	ಗರುಡನಹಳ್ಳಿ	30	40	150000	180000	180000	160000	200000	200000	300000	320000
17	ಎನ್.ಗೊಲ್ಲಹಳ್ಳಿ	30	40	100000	120000	120000	110000	130000	130000	195000	208000
18	ಗುರಗಂಜಿಗುರ್ಕಿ	30	40	100000	120000	120000	110000	130000	130000	195000	208000
19	ಗುಡ್ಡಣಪುರ	30	40	120000	150000	150000	130000	160000	160000	240000	256000
20	ಗಂಗಾಪುರ	30	40	100000	120000	120000	110000	130000	130000	195000	208000
21	ಗುಟ್ಟಹಳ್ಳಿ	30	40	100000	120000	120000	110000	130000	130000	195000	208000
22	ಚಟ್ನಹಳ್ಳಿ (ಚಿಕ್ಕನಹಳ್ಳಿ)	30	40	120000	150000	150000	130000	160000	160000	240000	256000
23	ಚುಂಚದೇನಹಳ್ಳಿ	50	60	300000	300000	300000	330000	330000	330000	495000	528000

1	2	3	5	6	7	8	10	11	12	13	14
24	ಚುಂಚದೇನಹಳ್ಳಿ ಎನ್.ಹೆಚ್	80	90	2000000	2000000	2000000	2300000	2300000	2300000	3450000	3680000
25	ಚಳ್ಳಹಳ್ಳಿ	30	40	120000	150000	150000	130000	160000	160000	240000	256000
26	ಚಿಕ್ಕಅಯ್ಯೂರು	30	40	200000	200000	200000	220000	220000	220000	330000	352000
27	ಚಿನ್ನಾಪುರ	30	40	120000	150000	150000	130000	160000	160000	240000	256000
28	ಚೌಡದೇನಹಳ್ಳಿ	50	60	400000	400000	400000	440000	440000	440000	660000	704000
29	ಚೌಡದೇನಹಳ್ಳಿ ಎನ್.ಹೆಚ್	100	110	2200000	2200000	2200000	2500000	2500000	2500000	3750000	4000000
30	ಚೆಲುವನಹಳ್ಳಿ	30	40	300000	300000	300000	330000	330000	330000	495000	528000
31	ಚೆಲುವನಹಳ್ಳಿ ಎನ್.ಹೆಚ್	80	90	2000000	2000000	2000000	2300000	2300000	2300000	3450000	3680000
32	ಚಿಕ್ಕನಹಳ್ಳಿ	50	60	150000	180000	180000	160000	200000	200000	300000	320000
33	ಚೆನ್ನೇನಹಳ್ಳಿ	30	40	100000	120000	120000	110000	130000	130000	195000	208000
34	ಚೊಕ್ಕಹಳ್ಳಿ	30	40	120000	150000	150000	130000	160000	160000	240000	256000
35	ಜಂಗಾಲಹಳ್ಳಿ	30	40	100000	120000	120000	110000	130000	130000	195000	208000
36	ತಿರುಮಲಕೊಪ್ಪ	30	40	120000	150000	150000	130000	160000	160000	240000	256000
37	ತ್ಯಾವನಹಳ್ಳಿ	30	40	120000	150000	150000	130000	160000	160000	240000	256000
38	ತಲಗುಂದ	50	60	250000	250000	250000	300000	300000	300000	450000	480000
39	ದೊಡ್ಡಅಯ್ಯೂರು	30	40	120000	150000	150000	130000	160000	160000	240000	256000
40	ದಂಡಿಗಾನಹಳ್ಳಿ	30	40	100000	120000	120000	110000	130000	130000	195000	208000

1	2	3	5	6	7	8	10	11	12	13	14
41	ದೇವರಪುರ	30	40	100000	120000	120000	110000	130000	130000	195000	208000
42	ನುಗ್ಗಲಾಪುರ	30	40	100000	120000	120000	110000	130000	130000	195000	208000
43	ನೆರ್ನಹಳ್ಳಿ	30	40	120000	150000	150000	130000	160000	160000	240000	256000
44	ನಾಚಹಳ್ಳಿ	30	40	100000	120000	120000	110000	130000	130000	195000	208000
45	ನಾಗಲಾಪುರ	30	40	100000	120000	120000	110000	130000	130000	195000	208000
46	ನಾಗಲಾಪುರ ಗೊಲ್ಲಹಳ್ಳಿ	30	40	250000	250000	250000	300000	300000	300000	450000	480000
46ಎ	ನಾಗಲಾಪುರ ಗೊಲ್ಲಹಳ್ಳಿ ಎನ್.ಹೆಚ್.	50	60	2500000	2500000	2500000	2800000	2800000	2800000	4200000	4480000
47	ಪೆಮ್ಮಶೆಟ್ಟಿಹಳ್ಳಿ	30	40	120000	150000	150000	130000	160000	160000	240000	256000
48	ಪಾರ್ಶ್ವಗಾನಹಳ್ಳಿ	30	40	100000	120000	120000	110000	130000	130000	195000	208000
49	ಪಾಪನಹಳ್ಳಿ	30	40	100000	120000	120000	110000	130000	130000	195000	208000
50	ಬೆಟ್ಟಬೇಣಜೇನಹಳ್ಳಿ	30	40	150000	180000	180000	160000	200000	200000	300000	320000
51	ಬಣಕನಹಳ್ಳಿ	30	40	100000	120000	120000	110000	130000	130000	195000	208000
52	ಬೈಚಾಪುರ	30	40	150000	180000	180000	160000	200000	200000	300000	320000
53	ಬೆಟ್ಟಹಳ್ಳಿ	30	40	150000	180000	180000	160000	200000	200000	300000	320000
54	ಮಡೇರಹಳ್ಳಿ (ಹೈವೇಇಬ್ಬದಿ)	80	90	2200000	2200000	2200000	2500000	2500000	2500000	3750000	4000000
55	ಮಡೇರಹಳ್ಳಿ	50	60	400000	400000	400000	440000	440000	440000	660000	704000
56	ಮಂಗಸಂದ್ರ	30	40	200000	250000	250000	220000	260000	260000	390000	416000

1	2	3	5	6	7	8	10	11	12	13	14
57	ಮಾರ್ಕಂಡಪುರ	30	40	150000	180000	180000	160000	200000	200000	300000	320000
58	ಮಡಿವಾಳ	30	40	200000	200000	200000	220000	220000	220000	330000	352000
59	ಮುದುವತ್ತಿ	30	40	150000	180000	180000	160000	200000	200000	300000	320000
60	ಮೈಲಾಂಡಹಳ್ಳಿ	30	40	120000	150000	150000	130000	160000	160000	240000	256000
61	ವೆಂಕಟಾಪುರ	30	40	150000	150000	150000	160000	160000	160000	240000	256000
62	ವೀರಗೊಂಡಹಳ್ಳಿ	30	40	100000	120000	120000	110000	130000	130000	195000	208000
63	ವಕ್ಕಲೇರಿ	50	60	250000	250000	250000	300000	300000	300000	450000	480000
64	ವಡಗೇರಿ ಜೋಡಿ	30	40	120000	150000	150000	130000	160000	160000	240000	256000
65	ಶೆಟ್ಟಿಕೊತ್ತನೂರು	30	40	150000	180000	180000	160000	200000	200000	300000	320000
66	ಶೆಟ್ಟಿಗಾನಹಳ್ಳಿ	30	40	120000	150000	150000	130000	160000	160000	240000	256000
67	ಶೀಗೇನಹಳ್ಳಿ	30	40	100000	120000	120000	110000	130000	130000	195000	208000
68	ಸಾಂಬಾಪುರ	30	40	100000	120000	120000	110000	130000	130000	195000	208000
69	ಸೂಲೂರು	30	40	150000	150000	150000	160000	200000	200000	300000	320000
70	ಸ್ವಾಮಿಗಳ ಗೊಲ್ಲಹಳ್ಳಿ	30	40	100000	120000	120000	110000	130000	130000	195000	208000
71	ಹೊಗರಿ ಗೊಲ್ಲಹಳ್ಳಿ	30	40	200000	200000	200000	220000	220000	220000	330000	352000
72	ಹೊಲೇರಹಳ್ಳಿ	30	40	100000	120000	120000	110000	130000	130000	195000	208000
73	ಹೊರಕೆರೆ	30	40	150000	150000	150000	160000	160000	160000	240000	256000
74	ಆಲೇರಿ	30	40	120000	120000	120000	130000	130000	130000	195000	208000

1	2	3	5	6	7	8	10	11	12	13	14
75	ಹನುಮಂತಪುರ	30	40	150000	180000	180000	160000	200000	200000	300000	320000
	ಹೋಳೂರು ಹೋಬಳಿ										
1	ಅರಿಕೇನಹಳ್ಳಿ	30	40	100000	120000	120000	110000	130000	130000	195000	208000
2	ಅಣ್ಣೇನಹಳ್ಳಿ	30	40	100000	120000	120000	110000	130000	130000	195000	208000
3	ಅಣ್ಣೀಹಳ್ಳಿ	30	40	100000	120000	120000	110000	130000	130000	195000	208000
4	ಅರಿನಾಗನಹಳ್ಳಿ	30	40	120000	150000	150000	130000	160000	160000	240000	256000
5	ಅಗ್ನಿಹಳ್ಳಿ	30	40	100000	120000	120000	110000	130000	130000	195000	208000
6	ಅರಳೀಮರದ ಹೊಸಹಳ್ಳಿ	30	40	100000	120000	120000	110000	130000	130000	195000	208000
7	ಐತರಾಸನಹಳ್ಳಿ	30	40	120000	150000	150000	130000	160000	160000	240000	256000
8	ಅಮಾನಿಜಿಲ್ಲಾಪಲ್ಲಿ	30	40	100000	120000	120000	110000	130000	130000	195000	208000
9	ಅಗ್ರಹಾರ	30	40	100000	120000	120000	110000	130000	130000	195000	208000
10	ಕಮ್ಮಸಂದ್ರ	30	40	100000	120000	120000	110000	130000	130000	195000	208000
11	ಕೊಂಡಸಂದ್ರ	30	40	100000	120000	120000	110000	130000	130000	195000	208000
12	ಕುಡುವನಹಳ್ಳಿ	30	40	100000	120000	120000	110000	130000	130000	195000	208000
13	ಕಾರಹಳ್ಳಿ	30	40	100000	120000	120000	110000	130000	130000	195000	208000
14	ಕೊಂಡೇನಹಳ್ಳಿ	30	40	100000	120000	120000	110000	130000	130000	195000	208000
15	ಕೃಷ್ಣಪುರ	30	40	100000	120000	120000	110000	130000	130000	195000	208000
16	ಗಟ್ಟಿಹಳ್ಳಿ	30	40	100000	120000	120000	110000	130000	130000	195000	208000

1	2	3	5	6	7	8	10	11	12	13	14
17	ಗೂಳಿಗಾನಹಳ್ಳಿ	30	40	120000	150000	150000	130000	160000	160000	240000	256000
18	ಗಂಗಟ್ಟ	30	40	100000	120000	120000	110000	130000	130000	195000	208000
19	ಗೋಪಸಂದ್ರ	30	40	100000	120000	120000	110000	130000	130000	195000	208000
20	ಗಂಗರಸನಹಳ್ಳಿ	30	40	100000	120000	120000	110000	130000	130000	195000	208000
21	ಗರುಡಪಾಳ್ಯ	30	40	100000	120000	120000	110000	130000	130000	195000	208000
22	ಚಲ್ಲಪ್ಪಲ್ಲಿ ಅಮಾನಿಕರೆ	30	40	100000	120000	120000	110000	130000	130000	195000	208000
23	ಚಲ್ಲಪ್ಪಲ್ಲಿ	30	40	100000	120000	120000	110000	130000	130000	195000	208000
24	ಚಿಕ್ಕಕುರುಬರಹಳ್ಳಿ	30	40	100000	120000	120000	110000	130000	130000	195000	208000
25	ಜನ್ನಪನಹಳ್ಳಿ	30	40	120000	150000	150000	130000	160000	160000	240000	256000
26	ಜಡೇರಿ	30	40	100000	120000	120000	110000	130000	130000	195000	208000
27	ಜಯಸಂದ್ರ	30	40	150000	180000	180000	160000	200000	200000	300000	320000
28	ತೊಂಡಾಲ ನಾಯ್ಕುಹಳ್ಳಿ	30	40	100000	120000	120000	110000	130000	130000	195000	208000
29	ತೊಟ್ಲಿಗಾನಹಳ್ಳಿ	30	40	120000	150000	150000	130000	160000	160000	240000	256000
30	ತೊಂಡಾಲ	30	40	100000	120000	120000	110000	130000	130000	195000	208000
31	ತಿಪ್ಪಸಂದ್ರ	30	40	100000	120000	120000	110000	130000	130000	195000	208000
32	ದೊಡ್ಡಕುರುಬರಹಳ್ಳಿ	30	40	100000	120000	120000	110000	130000	130000	195000	208000
33	ದಾದಿರೆಡ್ಡಿಹಳ್ಳಿ	30	40	100000	120000	120000	110000	130000	130000	195000	208000
34	ನಾಗನಾಯಕನಹಳ್ಳಿ	30	40	100000	120000	120000	110000	130000	130000	195000	208000

1	2	3	5	6	7	8	10	11	12	13	14
35	ನಾಯಕರಹಳ್ಳಿ	30	40	120000	150000	150000	130000	160000	160000	240000	256000
36	ನೆನುಮನಹಳ್ಳಿ	30	40	100000	120000	120000	110000	130000	130000	195000	208000
37	ನುಕ್ಕನಹಳ್ಳಿ	30	40	120000	150000	150000	130000	160000	160000	240000	256000
38	ಬೆಣ್ಣಂಗೂರು	30	40	120000	150000	150000	130000	160000	160000	240000	256000
39	ಬೆಸ್ತೇನಹಳ್ಳಿ	30	40	100000	120000	120000	110000	130000	130000	195000	208000
40	ಬೆಳ್ಳಂಬೂರಿ	30	40	120000	150000	150000	130000	160000	160000	240000	256000
41	ಬ್ಯಾಲಹಳ್ಳಿ	30	40	100000	120000	120000	110000	130000	130000	195000	208000
42	ಮತ್ತಿಕುಂಟೆ	30	40	100000	120000	120000	110000	130000	130000	195000	208000
43	ಮಣಿಘಟ್ಟ	30	40	120000	150000	150000	130000	160000	160000	240000	256000
44	ಮುದುವಾಡಿ ಹೊಸಹಳ್ಳಿ	30	40	150000	180000	180000	160000	200000	200000	300000	320000
45	ಮುದುವಾಡಿ	50	60	200000	200000	200000	220000	220000	220000	330000	352000
46	ಮಾರೇನಹಳ್ಳಿ	30	40	100000	120000	120000	110000	130000	130000	195000	208000
47	ಮಲ್ಲಸಂದ್ರ	30	40	200000	200000	200000	220000	220000	220000	330000	352000
48	ವಾನರಾಶಿ	30	40	120000	150000	150000	130000	160000	160000	240000	256000
49	ಉಪವಾಸಪುರ	30	40	100000	120000	120000	110000	130000	130000	195000	208000
50	ಶ್ಯಾನುಬೋಗನಹಳ್ಳಿ	30	40	100000	120000	120000	110000	130000	130000	195000	208000
51	ಸೋಮಸಂದ್ರ	30	40	100000	120000	120000	110000	130000	130000	195000	208000
52	ಸೋಮಶಾಸ್ತ್ರಿ ಹೊಸೂರು	30	40	100000	120000	120000	110000	130000	130000	195000	208000

1	2	3	5	6	7	8	10	11	12	13	14
53	ಹೋಳೂರು	30	40	150000	180000	180000	160000	200000	200000	300000	320000
54	ಜೋಡಿ ಹೋಳೂರು	30	40	150000	180000	180000	160000	200000	200000	300000	320000
55	ಹೆಚ್.ಜಿ.ಹೊಸೂರು	30	40	120000	150000	150000	130000	160000	160000	240000	256000
56	ಹೊಸೂರು	40	50	100000	120000	120000	110000	130000	130000	195000	208000
	ಸುಗಟೂರು ಹೋಬಳಿ										
1	ಅಣಲಕುಂಟೆ	30	40	120000	150000	150000	130000	160000	160000	240000	256000
2	ಅಂಕತಟ್ಟಿ	30	40	120000	150000	150000	130000	160000	160000	240000	256000
3	ಕೊಳಗಂಜನಹಳ್ಳಿ	30	40	100000	120000	120000	110000	130000	130000	195000	208000
4	ಕೆಂಬತ್ತನಹಳ್ಳಿ	30	40	100000	120000	120000	110000	130000	130000	195000	208000
5	ಕಾಕಿನತ್ತ	30	40	100000	120000	120000	110000	130000	130000	195000	208000
6	ಕಿತ್ತಂಡೂರು	30	40	100000	120000	120000	110000	130000	130000	195000	208000
7	ಕಲ್ಲೂರು	30	40	100000	120000	120000	110000	130000	130000	195000	208000
8	ಗೊಟ್ಟಿಹಳ್ಳಿ	30	40	100000	120000	120000	110000	130000	130000	195000	208000
9	ಗೌಡಹಳ್ಳಿ	30	40	100000	120000	120000	110000	130000	130000	195000	208000
10	ಚಿಟ್ನಹಳ್ಳಿ	30	40	150000	150000	150000	160000	160000	160000	240000	256000
11	ಚೆನ್ನಾಪುರ	30	40	120000	150000	150000	130000	160000	160000	240000	256000
12	ಜಂಗಮಗುರ್ಜೇನಹಳ್ಳಿ	30	40	150000	180000	180000	160000	200000	200000	300000	320000
13	ಜನ್ನಗಟ್ಟ	40	50	250000	250000	250000	300000	300000	300000	450000	480000
14	ತೊಟ್ಲಿ	40	50	150000	150000	150000	160000	160000	160000	240000	256000

1	2	3	5	6	7	8	10	11	12	13	14
15	ತುರಾಂಡಹಳ್ಳಿ	30	40	100000	120000	120000	110000	130000	130000	195000	208000
16	ತಲಗುಂದ ಪುರಹಳ್ಳಿ	30	40	200000	250000	250000	220000	300000	300000	450000	480000
17	ದಿನ್ನೆಹಳ್ಳಿ	30	40	100000	120000	120000	110000	130000	130000	195000	208000
18	ನಾಗನಾಳ	30	40	200000	200000	200000	220000	220000	220000	330000	352000
19	ಪಿಂಡಿಪಾಪನಹಳ್ಳಿ	30	40	120000	150000	150000	130000	160000	160000	240000	256000
20	ಭೀಮಾಪುರ	30	40	120000	150000	150000	130000	160000	160000	240000	256000
21	ಬೈಪನಹಳ್ಳಿ	30	40	200000	250000	250000	220000	300000	300000	450000	480000
22	ಬುಸನಹಳ್ಳಿ	30	40	150000	150000	150000	160000	160000	160000	240000	256000
23	ಬಳಗೇರಿ	30	40	120000	150000	150000	130000	160000	160000	240000	256000
24	ಬೊಮ್ಮಸಂದ್ರ	30	40	120000	150000	150000	130000	160000	160000	240000	256000
25	ಮಾಧವಗುರ್ಜೇನಹಳ್ಳಿ	30	40	120000	150000	150000	130000	160000	160000	240000	256000
26	ಮಟ್ನಹಳ್ಳಿ	30	40	100000	120000	120000	110000	130000	130000	195000	208000
27	ಮದನಹಳ್ಳಿ	30	40	100000	120000	120000	110000	130000	130000	195000	208000
28	ಮುಳ್ಳಹಳ್ಳಿ	30	40	120000	150000	150000	130000	160000	160000	240000	256000
29	ರಾಮಪುರ	30	40	100000	120000	120000	110000	130000	130000	195000	208000
30	ಉರಿಗಿಲಿ	30	40	120000	150000	150000	130000	160000	160000	240000	256000
31	ವೆಲಗಲಬುರ್ರೆ	30	40	100000	120000	120000	110000	130000	130000	195000	208000
32	ಉರಟ ಅಗ್ರಹಾರ	30	40	120000	150000	150000	130000	160000	160000	240000	256000
33	ಉಪ್ಪುಕುಂಟೆ	30	40	250000	250000	250000	300000	300000	300000	450000	480000
34	ಓಬೇನಹಳ್ಳಿ	30	40	100000	120000	120000	110000	130000	130000	195000	208000

1	2	3	5	6	7	8	10	11	12	13	14
35	ಶೆಟ್ಟಿಮಾದಮಂಗಲ	30	40	150000	150000	150000	160000	160000	160000	240000	256000
36	ಶೆಟ್ಟಿವಾರಹಳ್ಳಿ	30	40	120000	150000	150000	130000	160000	160000	240000	256000
37	ಶೀಗರೆಡ್ಡಿಹಳ್ಳಿ	30	40	120000	150000	150000	130000	160000	160000	240000	256000
38	ಶೆಟ್ಟಿಕುಂಟೆ	30	40	100000	120000	120000	110000	130000	130000	195000	208000
39	ಸುಗಟೂರು	50	60	200000	250000	250000	220000	300000	300000	450000	480000
40	ಸೋಮಾಂಬುದಿಅಗ್ರಹಾರ	30	40	100000	120000	120000	110000	130000	130000	195000	208000
41	ಸೋಮಾಂಬುದಿಅಮಾನಿಕೆರೆ		40	120000	150000	150000	130000	160000	160000	240000	256000
42	ಹಳವನಹಳ್ಳಿ	30	40	100000	120000	120000	110000	130000	130000	195000	208000
43	ಹನುಮಂತಪುರ	30	40	200000	200000	200000	220000	220000	220000	330000	352000
44	ಆಲೇರಿ	30	40	100000	120000	120000	110000	130000	130000	195000	208000

ಆಸ್ತಿ ಮೌಲ್ಯಮಾಪನಕ್ಕೆ ಸಂಬಂಧಪಟ್ಟಂತೆ ಅನ್ವಯಿಸುವ ವಿಶೇಷ ಸೂಚನೆಗಳು

1. ವಾಸೋಪಯೋಗಿ ಉದ್ದೇಶಕ್ಕಾಗಿ ಅಭಿವೃದ್ಧಿ ಹೊಂದಿರದ ಮತ್ತು ನಿವೇಶನಗಳಿಗಾಗಿ ವಿಂಗಡಿಸಲು ಅಧಿಕೃತವಾಗಿ ಸಂಬಂದಿಸಿದ ಪ್ರಾಧಿಕಾರದಿಂದ ಅಂಗೀಕರಿಸಲ್ಪಡದ ಜಮೀನಿಗೆ ಇತರೆ ಕೃಷಿ ಜಮೀನಿನ ದರದ ಶೇಕಡ 50 ರಷ್ಟು ಹೆಚ್ಚಿಗೆ ದರ ನಿಗದಿಪಡಿಸುವುದು.
2. ಕೈಗಾರಿಕಾ ಉಪಯೋಗಿ ಉದ್ದೇಶಕ್ಕಾಗಿ ಭೂ–ಪರಿವರ್ತನೆಯಾಗಿ ಅಭಿವೃದ್ಧಿ ಹೊಂದಿರದ ಮತ್ತು ನಿವೇಶನಗಳಾಗಿ ವಿಂಗಡಿಸಲು ಅಧಿಕೃತವಾಗಿ ಸಂಬಂಧಿಸಿದ ಪ್ರಾಧಿಕಾರದಿಂದ ಅಂಗೀಕರಿಸಲ್ಪಡದೆ ಇರುವ ಜಮೀನಿಗೆ ಇತರ ಕೃಷಿ ಜಮೀನಿನ ದರದ ಶೇಕಡ 25 ಹೆಚ್ಚಿಗೆ ದರ ನಿಗದಿಪಡಿಸುವುದು.
3. ರಾಜ್ಯ ಮತ್ತು ತಾಲ್ಲೂಕು ಹೆದ್ದಾರಿಗಳಿಗೆ ತಾಗಿರುವ ಸ್ವತ್ತುಗಳಿಗೆ ಕ್ರಮವಾಗಿ ಇತರೆ ಸ್ವತ್ತಿನ ದರದ ಶೇಕಡ 25 ಮತ್ತು ಶೇಕಡ 10 ರಷ್ಟು ದರ ನಿಗದಿಪಡಿಸುವುದು.
4. ಕೃಷಿ ಜಮೀನು ನೀರಾವರಿ ಸೌಲಭ್ಯ ಅಥವಾ ಭಾಗಾಯ್ತು ಬೆಳೆಗಾಗಿ ಉಪಯೋಗಿಸಲ್ಪಡುತ್ತಿದ್ದರೆ ಕೃಷಿ ಜಮೀನಿನ ದರದ ಶೇಕಡ 25 ರಷ್ಟು ಹೆಚ್ಚಿಗೆ ದರ ನಿಗದಿಪಡಿಸುವುದು.
5. ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಗೃಹ ನಿರ್ಮಾಣ ಸಹಕಾರ ಸಂಘಗಳ ನಿರ್ಮಿತ ಬಡಾವಣೆಗಳಲ್ಲಿರುವ ವಾಣಿಜ್ಯೋಪಯೋಗಿ ನಿವೇಶನಗಳಿಗೆ ಆಯಾ ಪ್ರದೇಶಗಳ ವಾಸೋಪಯೋಗಿ ನಿವೇಶನಗಳ ದರದ ಶೇಕಡ 30 ರಷ್ಟು ಹೆಚ್ಚಿಗೆ ದರ ನಿಗದಿಪಡಿಸುವುದು.
6. ವ್ಯಾಪ್ತಿ ಪರಿವರ್ತಿತ ನಿವೇಶನಗಳ ಮತ್ತು ಗ್ರಾಮ ಠಾಣಾ ಪ್ರದೇಶ ವ್ಯಾಪ್ತಿಯಲ್ಲಿರುವ ವಾಣಿಜ್ಯ ನಿವೇಶನಗಳಿಗೆ ಆಯಾ ಪ್ರದೇಶದಲ್ಲಿರುವ ವಾಸೋಪಯೋಗಿ ನಿವೇಶನಗಳ ದರದ ಶೇಕಡ 30 ರಷ್ಟು ಹೆಚ್ಚಿಗೆ ದರ ನಿಗದಿಪಡಿಸಿವುದು.
7. ಮೂಲೆ ನಿವೇಶನಗಳಿಗೆ ಮತ್ತು ಯಾವುದು ಎರಡು ಕಡೆ ರಸ್ತೆ ಇರುವ ನಿವೇಶನ ದರಗಳ ಶೇಕಡ 10 ರಷ್ಟು ಹೆಚ್ಚಿಗೆ ದರ ನಿಗದಿಪಡಿಸುವುದು.
8. ಈಗಾಗಲೇ ಮಾರ್ಗಸೂಚಿಯಲ್ಲಿ ಕೈಗಾರಿಕಾ ಉಪಯೋಗಿ ಎಂದು ಸ್ಪಷ್ಟಪಡಿಸಿರುವ ಪ್ರದೇಶಗಳಿಗೆ ವಾಸೋಪಯೋಗಿ ನಿವೇಶನದ ದರವನ್ನು ಅನುಸರಿಸತಕ್ಕದ್ದು ಈ ಪ್ರದೇಶವನ್ನು ಹೊರತುಪಡಿಸಿ ಇತರೆ ಎಲ್ಲಾ ಪ್ರದೇಶಗಳಲ್ಲಿ ಇರುವ ಕೈಗಾರಿಕ ಉಪಯೋಗಿ ನಿವೇಶನಗಳಿಗೆ ವಾಸೋಪಯೋಗಿ ನಿವೇಶನ ದರದ 1/2 ರಷ್ಟು ಬೆಲೆ ನಿಗದಿಪಡಿಸುವುದು.

By order and in the name of the Central Valuation Committee Bangalore.

Y N Prasanna Kumar
Secretary,
Central Valuation Sub-Committee,
Kolar Tauk, Kolar

P.R. No. 1182

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 87 ಇಆತ 2009 ಬೆಂಗಳೂರು, ದಿನಾಂಕ: 07ನೇ ಅಕ್ಟೋಬರ್, 2011

ಕರ್ನಾಟಕ ರಾಜ್ಯ ಸರ್ಕಾರದ ಎಲ್ಲಾ ಸರ್ಕಾರ ನೌಕರರಿಗೂ (ಅಧಿಕಾರಿ/ಸಿಬ್ಬಂದಿ)

- ಅಗತ್ಯ ತರಬೇತಿ ನೀಡುವ ಉದ್ದೇಶದಿಂದ;
- ಸರ್ಕಾರಿ ಸಿಬ್ಬಂದಿಯ ಕಾರ್ಯದಕ್ಷತೆಯನ್ನು ಉತ್ತಮಗೊಳಿಸಲು;
- ಸೂಕ್ತ ತರಬೇತಿ ಮೂಲಕ ಸಿಬ್ಬಂದಿ ವರ್ಗ ಮತ್ತು ಸಂಸ್ಥೆಗಳಲ್ಲಿ ವೃತ್ತಿಪರತೆಯ ಅವಶ್ಯಕತೆಗಳನ್ನು ಹೆಚ್ಚಿಸಲು, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವಾತಾವರಣಗಳಿಗೆ ಹೆಚ್ಚಿನ ರೀತಿಯಲ್ಲಿ ಸ್ಪಂದಿಸಲು;
- ತರಬೇತಿ ಸಂಸ್ಥೆಗಳನ್ನು ಬಲಪಡಿಸಲು; ಅವುಗಳಿಗೆ ಅವಶ್ಯಕವಿರುವ ಮೂಲಭೂತ ಸೌಲಭ್ಯ ಹಾಗೂ ಬೋಧನಾ ಸಿಬ್ಬಂದಿಯ ದಕ್ಷತೆಯನ್ನು ಹೆಚ್ಚಿಸಲು;
- ಸೂಕ್ತ ನಾಯಕತ್ವದ ಮುಖೇನ ಸರ್ಕಾರದ ಕಾರ್ಯಕ್ಷಮತೆಯಲ್ಲಿ ಅಗತ್ಯ ಬದಲಾಣೆಯನ್ನು ತರಲು;

ಕರ್ನಾಟಕ ರಾಜ್ಯ ತರಬೇತಿ ನೀತಿಯನ್ನು ರೂಪಿಸಲಾಗಿದೆ. ಈ ತರಬೇತಿ ನೀತಿಯು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಅಧಿಕೃತವಾಗಿ ಜಾರಿಗೆ ಬರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಭಾರತಿ ಆರ್. ನಾಯಕ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಆಸು- ತರಬೇತಿ)

ರಾಜ್ಯ ತರಬೇತಿ ಕಾರ್ಯನೀತಿ

ಕಾರ್ಯಕಾರಿ ಸಾರಾಂಶ:

ಭಾರತ ಸರ್ಕಾರದ ರಾಷ್ಟ್ರೀಯ ತರಬೇತಿ ನೀತಿಯನ್ನು ಏಪ್ರಿಲ್ 1996ರಲ್ಲಿ ಬಿಡುಗಡೆ ಮಾಡಲಾಯಿತು. ಭಾರತ ಸರ್ಕಾರವು, ರಾಜ್ಯ ತರಬೇತಿ ಕಾರ್ಯನೀತಿಯನ್ನು ರೂಪಿಸಿ ಅನುಷ್ಠಾನಗೊಳಿಸುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಿರುತ್ತದೆ. ಅದರಂತೆ ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಡಿಪಿಎಆರ್ 87, ಕೆಟಿಪಿ 2009, ದಿನಾಂಕ 01.01.2010ರ ಮೂಲಕ ಒಂದು ಕೇಂದ್ರ ತಂಡವನ್ನು (ಕೋರ್ ಗ್ರೂಪ್) ರಚಿಸಿತು. ಸದರಿ ಕೇಂದ್ರ ತಂಡವು ಸಭೆಯನ್ನು ನಡೆಸಿ ಚರ್ಚಿಸಿದ ನಂತರ ಸರ್ಕಾರಕ್ಕೆ ಸಲ್ಲಿಸುವುದಕ್ಕಾಗಿ ಒಂದು ಕರಡನ್ನು ಅಂತಿಮವಾಗಿ ರೂಪಿಸಿತು.

ಈ ಕಾರ್ಯನೀತಿಯಲ್ಲಿ ನೌಕರರಿಗೆ ಅವರ ವೃತ್ತೀಯ ಬದುಕಿನ ಕ್ರಮಬದ್ಧವಾದ ಕಾಲಾವಧಿಯಲ್ಲಿ ಉತ್ತಮ ಗುಣಮಟ್ಟದ ತರಬೇತಿಯನ್ನು ನೀಡುವುದಕ್ಕಾಗಿ ಅವಕಾಶ ಕಲ್ಪಿಸುತ್ತದೆ. ಈ ಕಾರ್ಯನೀತಿಯು ಎಲ್ಲರಿಗೂ ತರಬೇತಿಯನ್ನು ನೀಡಲು ಶಿಫಾರಸು ಮಾಡುತ್ತದೆ. ಇದು, ಅವಶ್ಯಕತೆ ಆಧಾರಿತ ತರಬೇತಿ ಮತ್ತು ಕಲಿಕೆಯನ್ನು ಅಳವಡಿಸಿಕೊಳ್ಳುವಂತೆ ಸೂಚಿಸುತ್ತದೆ. ಇದು ಸರ್ಕಾರದ ಪ್ರತಿ ಹಂತದಲ್ಲಿ ಕಾರ್ಯದಕ್ಷತೆ ಹಾಗೂ ಕೌಶಲಗಳನ್ನು ಹೆಚ್ಚಿಸಿಕೊಳ್ಳಲು ಶಿಫಾರಸು ಮಾಡುತ್ತದೆ. ಈ ಕಾರ್ಯನೀತಿಯಲ್ಲಿ, ಪ್ರಾರಂಭಿಕ ಹಂತದಲ್ಲಿಯೇ ಕಡ್ಡಾಯವಾಗಿ ತರಬೇತಿಯನ್ನು ನೀಡುವುದರ ಬಗ್ಗೆ ಆಲೋಚಿಸಲಾಗಿರುತ್ತದೆ. ಪ್ರತಿಯೊಬ್ಬ ಅಧಿಕಾರಿ/ ನೌಕರನು ತನ್ನ ವೃತ್ತೀಯ ಬದುಕಿನಲ್ಲಿ ಕನಿಷ್ಠ ಮೂರು ತರಬೇತಿ ಕಾರ್ಯಕ್ರಮಗಳನ್ನು ಪಡೆದುಕೊಳ್ಳಬೇಕು. ಪ್ರತಿಯೊಂದು ಇಲಾಖೆಯು, ನೌಕರರ ಪ್ರತಿಯೊಂದು ಹಂತ/ ಪ್ರವರ್ಗಕ್ಕೆ "ಕಾರ್ಯದಕ್ಷತೆ"ಯನ್ನು (ನಿರ್ವಹಣಾ ಮತ್ತು ವೃತ್ತಿಪರ) ಗುರುತಿಸುವಂತೆ ಸಲಹೆ ಮಾಡಲಾಗಿದೆ. ಈ "ಕಾರ್ಯದಕ್ಷತೆ ಬೆಳವಣಿಗೆ"ಯನ್ನು ಪ್ರತಿಯೊಂದು ಇಲಾಖೆಯ ಕಾರ್ಯನಿರ್ವಹಣೆಯನ್ನಾಗಿ ಸಂಯೋಜಿಸಬಹುದಾಗಿದೆ. ಪ್ರತಿಯೊಂದು ಇಲಾಖೆಯು ಸ್ವತಃ ತನ್ನ ವ್ಯವಸ್ಥೆಯ ಅಗತ್ಯತೆಯನ್ನು ಗುರುತಿಸಿಕೊಳ್ಳಬಹುದಾಗಿದೆ. ಒಂದು ಇಲಾಖೆಯು, "ಕಾರ್ಯದಕ್ಷತೆ ತರಬೇತಿ ಮತ್ತು ಕಾರ್ಯದಕ್ಷತೆ ಬೆಳವಣಿಗೆ" ಆಧಾರದ ಮೇಲೆ, ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನಕ್ಕಾಗಿ ದತ್ತಸಂಚಯವನ್ನು ಸಹ (ಹೆಚ್‌ಆರ್‌ಎಂಎಸ್ ಆಧರಿಸಿ) ನಿರ್ವಹಿಸಬಹುದಾಗಿರುತ್ತದೆ. ಈ ತರಬೇತಿಯನ್ನು ರಾಜ್ಯ ತರಬೇತಿ ಸಂಸ್ಥೆಗಳು, ಸರ್ಕಾರೇತರ ಸಂಘಸಂಸ್ಥೆಗಳು, ಖಾಸಗಿ ತರಬೇತಿ ಸಂಸ್ಥೆಗಳು (ನಿರ್ದಿಷ್ಟವಾಗಿ ಈ ಉದ್ದೇಶಕ್ಕಾಗಿಯೇ ಗುರುತಿಸಲಾದ) ಮತ್ತು ಪರಿಣಿತರ ಮೂಲಕ ನಿಡಬಹುದಾಗಿರುತ್ತದೆ. ಇದರಲ್ಲಿ ಸ್ಯಾಟ್‌ಕಾಮ್ (SATCOM), ಇ-ಕಲಿಕೆ, ದೂರಶಿಕ್ಷಣದಂಥ ನವನವೀನ ತರಬೇತಿ ವಿಧಾನಗಳನ್ನು ಸೇರಿಸಲಾಗಿದೆ. ಆಡಳಿತ ತರಬೇತಿ ಸಂಸ್ಥೆಯು ತರಬೇತಿಗಾಗಿ ಹಾಗೂ ಸರ್ಕಾರದ ತರಬೇತಿ ಸಮಾಲೋಚಕನಂತೆ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸಬಹುದಾಗಿದೆ. ರಾಜ್ಯದಲ್ಲಿ ಸುಮರು 200 ತರಬೇತಿ ಸಂಸ್ಥೆಗಳಿವೆ. ಎಲ್ಲ ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶದ ಚುನಾಯಿತ ಪ್ರತಿನಿಧಿಗಳಿಗೆ ತರಬೇತಿ ನೀಡುವಂತೆ ಸಲಹೆ ಮಾಡಲಾಗಿದೆ. ಪ್ರತಿಯೊಂದು ಇಲಾಖೆಯಲ್ಲಿನ ತರಬೇತಿ ವ್ಯವಸ್ಥಾಪಕರು/ ಮಾನವಸಂಪನ್ಮೂಲ (ಹೆಚ್.ಆರ್) ವ್ಯವಸ್ಥಾಪಕರ ಪಾತ್ರ ಮತ್ತು ಹೊಣೆಗಾರಿಕೆಯನ್ನು ನಮೂದಿಸಲಾಗಿದೆ.

ತೀವ್ರವಾದ ತರಬೇತಿಗಾಗಿ ಈ ಮುಂದಿನ ಕ್ಷೇತ್ರಗಳನ್ನು ಸೂಚಿಸಲಾಗಿದೆ, ಅವುಗಳೆಂದರೆ, ಮಾಹಿತಿ ತಂತ್ರಜ್ಞಾನ, ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ, ಯೋಜನೆಯನ್ನು ರೂಪಿಸುವುದು ಮತ್ತು ಮೇಲ್ವಿಚಾರಣೆ, ಸಾರ್ವಜನಿಕ ನೀತಿ, ಸರ್ಕಾರ ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಉತ್ತೇಜನ ಮತ್ತು ಪಾರದರ್ಶಕತೆ ಹಾಗೂ ಉತ್ತರದಾಯಿತ್ವ. ತೀವ್ರವಾದ ತರಬೇತಿಗಾಗಿ, ಹೆಚ್ಚಿನ ಸಂಖ್ಯೆಯ ಅತ್ಯಾಧುನಿಕ ವಿಲೇವಾರಿ ವ್ಯವಸ್ಥೆಯನ್ನು ಹಾಗೂ ಉತ್ತಮ ಮಾನವಸಂಪನ್ಮೂಲ ಅಭಿವೃದ್ಧಿಗಾಗಿ ಮಧ್ಯಸ್ಥಿಕೆ ವಹಿಸುವ ಸಾಮರ್ಥ್ಯವನ್ನು ಹೊಂದಿರುವ ಆರೋಗ್ಯ, ಕಂದಾಯ, ಶಿಕ್ಷಣ, ಗ್ರಾಮೀಣ ಮತ್ತು ನಗರಾಭಿವೃದ್ಧಿ, ಕೃಷಿ, ಪೊಲೀಸ್ ಇಲಾಖೆಗಳನ್ನು ಗುರುತಿಸಲಾಗಿದೆ.

ವಿಷಯಾನುಕ್ರಮಣಿಕೆ

1. ಪೀಠಿಕೆ

1.1 ಸರ್ಕಾರವು ಅಭಿವೃದ್ಧಿ ಮತ್ತು ಕಲ್ಯಾಣ ಕ್ಷೇತ್ರದಲ್ಲಿ ವ್ಯಾಪಕವಾದ ರಚನಾತ್ಮಕ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಸರ್ಕಾರದ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು, ಆಯವ್ಯಯ ಸಿದ್ದಪಡಿಸುವುದು, ಕಾರ್ಯಕ್ರಮಗಳ ಮೇಲ್ವಿಚಾರಣೆ ಮಾಡುವುದು ಮತ್ತು ಜನರೊಂದಿಗೆ ಸಂವಹನ ಮಾಡುವ ಮೂಲಕ ಸರ್ಕಾರಿ ನೌಕರರು, ಜನರ ಜೀವನದ ಮೇಲೆ ಪರಿಣಾಮ ಉಂಟು ಮಾಡುವ ಅವಕಾಶ ಹೊಂದಿದ್ದಾರೆ. ಈ ನಿಟ್ಟಿನಲ್ಲಿ ಅವರ ಸಾಧನೆಯು, ಅವರು ತಮ್ಮ ವೃತ್ತಿಯನ್ನು ಅಭಿವೃದ್ಧಿ ಪ್ರೇರಿತ ದೃಷ್ಟಿಕೋನವನ್ನಿಟ್ಟುಕೊಂಡು ಎಷ್ಟು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿದ್ದಾರೆ ಎನ್ನುವ ಅಂಶದ ಮೇಲೆ ಅವಲಂಬಿತವಾಗಿದೆ. ಇಂತಹ ಮಹತ್ ಕಾರ್ಯವನ್ನು ಈಡೇರಿಸಲು ಆಡಳಿತ ವ್ಯವಸ್ಥೆಯನ್ನು ಒಂದು ಸಾಧನವಾಗಿ ಮಾಡುವಲ್ಲಿ ತರಬೇತಿಯು ಗಣನೀಯವಾಗಿ ನೆರವಾಗುತ್ತದೆ.

1.2 ಭಾರತ ಸರ್ಕಾರದ ರಾಷ್ಟ್ರೀಯ ತರಬೇತಿ ನೀತಿಯು 1996ರಲ್ಲಿ ಪ್ರಕಟವಾಯಿತು. ತರಬೇತಿ ನೀಡುವ ಕುರಿತಂತೆ ರಾಜ್ಯಗಳ ಬದ್ಧತೆ, ತರಬೇತಿಯ ಉದ್ದೇಶ, ಕಾರ್ಯತಂತ್ರ, ವಿಷಯಗಳು ಮತ್ತು ತರಬೇತಿ ಕ್ಷೇತ್ರದಲ್ಲಿ ಅನುಸರಿಸಬೇಕಾದ ವಿಧಾನಗಳನ್ನು ವಿವರವಾಗಿ ಸ್ಪಷ್ಟಪಡಿಸುವ ತರಬೇತಿ ನೀತಿಗೆ ಸಂಬಂಧಿಸಿದ ದಾಖಲೆಯೊಂದನ್ನು ರಾಷ್ಟ್ರೀಯ ತರಬೇತಿ ನೀತಿಯ ಮಾದರಿಯಲ್ಲಿ ರೂಪಿಸುವಂತೆ ರಾಜ್ಯ ಸರ್ಕಾರಗಳನ್ನು ಕೇಳಿಕೊಳ್ಳಲಾಯಿತು. ರಾಜ್ಯಗಳು ನಿರ್ದಿಷ್ಟ ನೀತಿ ನಿರೂಪಣೆಯನ್ನು ಒಳಗೊಂಡಿರುವ ದಾಖಲೆಯನ್ನು ಹೊಂದುವ ಮಹತ್ವವೇನೆಂದರೆ ಅದು ಸರಕಾರಗಳಲ್ಲಿ ಬದಲಾವಣೆಯಾದರೂ ಸ್ಥಿರವಾದ ತರಬೇತಿ ಧೋರಣೆಯನ್ನು ಉಳಿಸಿಕೊಂಡು, ಅದನ್ನು ಕಾರ್ಯರೂಪಕ್ಕೆ ತರುವುದನ್ನು ಖಾತರಿಪಡಿಸಲು ಸಾಧ್ಯವಾಗುತ್ತದೆ ಎಂಬುದಾಗಿವೆ.

1.3 ಸರಕಾರಿ ಇಲಾಖೆಗಳ / ನೌಕರರ, ಬದಲಾಗುತ್ತಿರುವ ಅವಶ್ಯಕತೆಗಳಿಗೆ ಸ್ಪಂದಿಸಿ ಸಕಾರಾತ್ಮಕವಾಗಿ ಪ್ರತಿಕ್ರಯಿಸುವುದು ತರಬೇತಿ ನೀತಿಯ ಗುರಿಯಾಗಿರಬೇಕು.

1.4 **ಅವಶ್ಯಕತೆ:**

ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಸರಕಾರದ ಪಾತ್ರದಲ್ಲಿ ಮಹತ್ತರ ಬದಲಾವಣೆಯಾಗಿದೆ. ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ಸಹಭಾಗಿತ್ವ ವಿಧಾನಕ್ಕೆ ಒತ್ತು ನೀಡಲಾಗುತ್ತಿದೆ. ಜನತೆಯು ಕೂಡಾ ಸ್ಪಂದನಶೀಲವಾದ ಜವಾಬ್ದಾರಿಯುತ ಸರಕಾರವನ್ನು ನಿರೀಕ್ಷಿಸುತ್ತಿದೆ. ವಿವಿಧ ಪಾಲುಗಾರರು ಸಮಾಲೋಚನೆಯಲ್ಲಿ ಭಾಗವಹಿಸುವ ಮೂಲಕ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವಂತೆ ಮಾಡಲಾಗುತ್ತಿದೆ. ಸರಕಾರದ ಬಹು ದೊಡ್ಡ ಕಾರ್ಯಪಡೆಯಾಗಿರುವ ಸರಕಾರಿ ನೌಕರರು ಮೇಲಿನ ಬದಲಾವಣೆಗೆ ಹೊಂದಿಕೊಳ್ಳಲು ಸಾಧ್ಯವಾಗುವಂತೆ ಅವರ ಜ್ಞಾನ, ಕೌಶಲ್ಯ ಮತ್ತು ಮನೋಭಾವದಲ್ಲಿ ಬದಲಾವಣೆ ಆಗಲೇಬೇಕಾದ ಅವಶ್ಯಕತೆ ಇದೆ. ಇದು ರಾಜ್ಯ ತರಬೇತಿ ನೀತಿಯ ಅವಶ್ಯಕತೆಯನ್ನು ಒತ್ತಿ ಹೇಳುತ್ತದೆ.

1.5 ಹೆಚ್ಚುತ್ತಿರುವ ತರಬೇತಿ ಅವಶ್ಯಕತೆಯನ್ನು ಗಣನೆಗೆ ತೆಗೆದುಕೊಂಡು ಎಲ್ಲ ಹಂತದ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಮತ್ತು ನೌಕರರಿಗೆ ತರಬೇತಿಯನ್ನು ವ್ಯವಸ್ಥೆಗೊಳಿಸುವುದು ಸರಕಾರದ ಮುಂದಿರುವ ಸವಾಲಾಗಿದೆ. ಈ ಸವಾಲನ್ನು ಈಡೇರಿಸುವ ಸಂದರ್ಭದಲ್ಲಿ ಪ್ರಶಿಕ್ಷಣಾರ್ಥಿಗಳ ಇಚ್ಛೆ ಮತ್ತು ಅವಶ್ಯಕತೆಗಳ ನಡುವಿನ ವ್ಯತ್ಯಾಸಗಳನ್ನು ಪರಿಗಣಿಸಬೇಕು.

ದೃಷ್ಟಿಕೋನ

1.6 "ಜ್ಞಾನದ" ಉನ್ನತೀಕರಣ, ಕೌಶಲ್ಯಗಳ ಅಭಿವೃದ್ಧಿ ಮತ್ತು ಸೇವೆಗಳ ಪೂರೈಕೆಯಲ್ಲಿ ದಕ್ಷತೆ ಮತ್ತು ಉತ್ತಮ ಪರಿಣಾಮವನ್ನು ತರುವುದು.

1.7 ಸರಕಾರ ಸಿಬ್ಬಂದಿಗಳ ಭಾಗವಹಿಸುವಿಕೆಯನ್ನು ಉತ್ತಮಪಡಿಸುವ ಮೂಲಕ ಆಡಳಿತದ ಎಲ್ಲಾ ಹಂತಗಳಲ್ಲೂ ಅವರ ಕರ್ತವ್ಯ ಪ್ರಜ್ಞೆಯನ್ನು ಹೆಚ್ಚಿಸಲು ಸಾಮರ್ಥ್ಯಾಭಿವೃದ್ಧಿ ಮಾಡುವುದು.

ಧ್ಯೇಯೋದ್ದೇಶ:

1.8 ಸರ್ಕಾರಿ ನೌಕರರಲ್ಲಿ ಅಂತರ್ಗತವಾಗಿರುವ "ಸರ್ಕಾರಿ ಸೇವೆ" ಯ ಪರಿಕಲ್ಪನೆಯನ್ನು 'ಸಾರ್ವಜನಿಕ ಸೇವೆಗೆ' ಪರಿವರ್ತಿಸುವುದು.

ಮಾರ್ಗದರ್ಶಿ ತತ್ವಗಳು:

1.9 ಎಲ್ಲಾ ಹಂತದ ಸರ್ಕಾರದ ಸಿಬ್ಬಂದಿಗಳಲ್ಲಿ ನಿರಂತರ ಕೌಶಲ್ಯಾಭಿವೃದ್ಧಿಪಡಿಸುವ ಕುರಿತು ತರಬೇತಿ ನೀತಿಯು ಚಿಂತನೆ ನಡೆಸುತ್ತಿದೆ. ಸರ್ಕಾರಿ ಸೇವೆಯಲ್ಲಿ ಕಾರ್ಯ ನಿರ್ವಹಣೆಯನ್ನು ಅಭಿವೃದ್ದಿಪಡಿಸಲು ಅವರಿಗೆ ಕಾಲಕಾಲಕ್ಕೆ ಅಗತ್ಯವಿರುವ ತರಬೇತಿಗಳನ್ನು ನೀಡುವುದು ಅವಶ್ಯಕ ಮತ್ತು ಅಪೇಕ್ಷಣಿಯವಾಗಿದೆ.

1.10 ತರಬೇತಿಗಳನ್ನು ಸರಬರಾಜು ಆಧಾರಿತ ಪದ್ದತಿಯಿಂದ ಅವಶ್ಯಕತೆ ಆಧಾರಿತ ತರಬೇತಿ ಮತ್ತು ಕಲಿಕೆಯ ವ್ಯವಸ್ಥೆಗೆ ಬದಲಾಯಿಸುವ ಕಾರ್ಯ ಆಗಬೇಕಾಗಿದೆ.

1.11 ಸರ್ಕಾರದ ಪ್ರತಿಯೊಂದು ಹಂತದಲ್ಲೂ ಕೌಶಲ್ಯ ಮತ್ತು ದಕ್ಷತೆಯನ್ನು ತರುವ ನಿಟ್ಟಿನಲ್ಲಿ ಸಿಬ್ಬಂದಿಗಳ ಸೇವೆಗೆ ಸೇರುವ ಪ್ರಾಥಮಿಕ ಹಂತದಿಂದ ಆರಂಭಿಸಿ, ಅವರ ಮುಂದಿನ ಸೇವಾವಧಿಯಲ್ಲಿ ಕಾಲಕಾಲಕ್ಕೆ ತರಬೇತಿಗಳನ್ನು ನೀಡಬೇಕಾಗಿದೆ.

1.12 ಇದರಿಂದ ಸಾರ್ವಜನಿಕ ಸೇವೆಗಳ ಪೂರೈಕೆಯಲ್ಲಿ ಸುಧಾರಣೆ ಮತ್ತು ಗುಣಾತ್ಮಕ ಆಡಳಿತವನ್ನು ನಿರೀಕ್ಷಿಸಬಹುದು.

ರಾಜ್ಯ ತರಬೇತಿ ನೀತಿಯ ಉದ್ದೇಶಗಳು:

1.13

- ಎಲ್ಲಾ ಸರ್ಕಾರಿ ಅಧಿಕಾರಿ/ ಸಿಬ್ಬಂದಿಯವರಿಗೂ ತರಬೇತಿ ನೀಡುವುದು
- ಸರ್ಕಾರಿ ಸಿಬ್ಬಂದಿಗಳ ದಕ್ಷತೆಯನ್ನು ಅಭಿವೃದ್ಧಿಪಡಿಸುವುದು
- ವ್ಯಕ್ತಿಗಳು ಮತ್ತು ಸಂಸ್ಥೆಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸಲು ಅಗತ್ಯವಿರುವ ವೃತ್ತಿಯ ಜ್ಞಾನ ಮತ್ತು ನೈಪುಣ್ಯತೆಯನ್ನು ತರಬೇತಿಯಿಂದ ಹೆಚ್ಚಿಸುವುದು.
- ವೃತ್ತಿಯ ಅಗತ್ಯತೆಗಳನ್ನು ಹಾಗೂ ಕಾರ್ಯ ನಿರ್ವಹಿಸುತ್ತಿರುವ ಸ್ಥಳದ ಸಾಮಾಜಿಕ – ಆರ್ಥಿಕ ಮತ್ತು ರಾಜಕೀಯ ಪರಿಸರದ ಸೂಕ್ಷ್ಮತೆಯನ್ನು ಚೆನ್ನಾಗಿ ಅರಿತುಕೊಳ್ಳಲು ಉತ್ತೇಜನ ನೀಡುವುದು ಮತ್ತು ದೃಷ್ಟಿಕೋನವನ್ನು ಸರಿಯಾದ ರೀತಿಗೆ ಹೊಂದಿಸಿಕೊಳ್ಳುವುದು.
- ತರಬೇತಿ ಸಂಸ್ಥೆಗಳ ಮೂಲಭೂತ ಸೌಲಭ್ಯಗಳನ್ನು ಬಲಪಡಿಸುವುದು ಮತ್ತು ಬೋಧಕ ವರ್ಗದವರ ಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ.
- ಬದಲಾವಣೆಯ ನಿರ್ವಹಣೆ ಹಾಗೂ ಮುಂದಾಳತ್ವ.

ರಾಜ್ಯ ತರಬೇತಿ ಪರಿಷತ್ತು:

1.14 ರಾಜ್ಯ ಸರ್ಕಾರದ ಪ್ರತಿನಿಧಿಗಳು, ಪ್ರಮುಖ ಸಚಿವ ಖಾತೆಗಳ ಮುಖ್ಯಸ್ಥರು ಹಾಗೂ ಸರ್ಕಾರದ ಇತರ ಪ್ರಮುಖ ಕಾರ್ಯ ಸಂಸ್ಥೆಗಳು, ಪ್ರಮುಖ ತರಬೇತಿ ಸಂಸ್ಥೆಗಳು ಹಾಗೂ ಸರ್ಕಾರದ ಅಥವಾ ಹೊರಗಿನ ಸಂಸ್ಥೆಗಳ ಹಾಗೂ ಸುಪ್ರಸಿದ್ಧ ಸಂಸ್ಥೆಯ ತಜ್ಞರನ್ನೊಳಗೊಂಡ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಮುಖ್ಯಸ್ಥರಾಗಿರುವ ರಾಜ್ಯ ತರಬೇತಿ ಪರಿಷತ್ತು ಇರತಕ್ಕದ್ದು.

1.15 ಕರ್ನಾಟಕ ರಾಜ್ಯ ತರಬೇತಿ ಪರಿಷತ್ತಿನ ರಚನೆ:

ಮುಖ್ಯ ಕಾರ್ಯದರ್ಶಿಗಳು		ಅಧ್ಯಕ್ಷರು
1.	ಅಪರ ಮುಖ್ಯ ಕಾರ್ಯದರ್ಶಿಗಳು	ಸದಸ್ಯರು
2.	ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು	ಸದಸ್ಯರು
3.	ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ	ಸದಸ್ಯರು
4.	ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ	ಸದಸ್ಯರು
5.	ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ	ಸದಸ್ಯರು
6.	ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು	ಸದಸ್ಯರು
7.	ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ಸದಸ್ಯರು
8.	ನಿರ್ದೇಶಕರು, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ, ಬೆಂಗಳೂರು	ಸದಸ್ಯರು
9.	ನಿರ್ದೇಶಕರು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬೆಂಗಳೂರು	ಸದಸ್ಯರು
10.	ಅಧ್ಯಕ್ಷರು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್	ಸದಸ್ಯರು
11.	ಪ್ರಧಾನ ಕಾರ್ಯದರ್ಶಿಗಳು, ಸಿಆಸುಇ (ಆಡಳಿತ ಸುಧಾರಣೆ)	ಸದಸ್ಯ ಕಾರ್ಯದರ್ಶಿ

ಅಹ್ವಾನಿತರು :

12. ಪ್ರಧಾನ ಕಾರ್ಯದರ್ಶಿಗಳು, ಗೃಹ ಇಲಾಖೆ
13. ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
14. ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ
15. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ
16. ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ
17. ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ
18. ನಿರ್ದೇಶಕರು, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ, ಬೆಂಗಳೂರು
19. ನಿರ್ದೇಶಕರು, ಫಿಸ್ಕಲ್ ಪಾಲಿಸಿ ಇನ್ಸ್ಟಿಟ್ಯೂಟ್, ಬೆಂಗಳೂರು
20. ಅಧ್ಯಕ್ಷರು, ತರಬೇತಿ ಕಾರ್ಯಕ್ಷೇತ್ರದಲ್ಲಿ ಸಾಕಷ್ಟು ಕೊಡುಗೆಗಳನ್ನು ನೀಡಿರುವ ಯಾರನ್ನಾದರೂ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು.
21. ನಿರ್ದೇಶಕರು, ಸೆಂಟರ್ ಫಾರ್ ಗುಡ್ ಗವರ್ನೆನ್ಸ್.

1.16 ರಾಜ್ಯ ತರಬೇತಿ ಪರಿಷತ್ತಿನ ಕರ್ತವ್ಯಗಳು ಮತ್ತು ಜವಾಬ್ದಾರಿಗಳು:

ರಾಜ್ಯ ತರಬೇತಿ ನೀತಿಯನ್ನು ಕಾರ್ಯರೂಪಕ್ಕೆ ತರಲು ಪರಿಷತ್ತು ಮೇಲ್ವಿಚಾರಣೆ ನಡೆಸುವುದು ಹಾಗೂ ಸರ್ಕಾರಕ್ಕೆ ಮಾರ್ಗದರ್ಶನ ನೀಡಬೇಕು. ತರಬೇತಿ ನೀತಿ, ತರಬೇತಿ ವಿನ್ಯಾಸಗಳು ಮತ್ತು ಅವುಗಳ ಅನುಷ್ಠಾನಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಹಾಗೂ ವಿಷಯಗಳ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡುವುದು ಪರಿಷತ್ತಿನ ಜವಾಬ್ದಾರಿ.

1.17 ಉನ್ನತ – ಅಧಿಕಾರದ ಸಮನ್ವಯ ಸಮಿತಿ:

• ಅಪರ ಮುಖ್ಯ ಕಾರ್ಯದರ್ಶಿ	ಅಧ್ಯಕ್ಷರು
• ಪ್ರಧಾನ ಕಾರ್ಯದರ್ಶಿಗಳು, ಸಿ.ಆ.ಸು.ಇ. (ಆಡಳಿತ ಸುಧಾರಣೆ)	ಸದಸ್ಯರು
• ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು	ಸದಸ್ಯರು
• ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ಸದಸ್ಯರು
• ಉಪಕಾರ್ಯದರ್ಶಿಗಳು, ಸಿ.ಆ.ಸು.ಇ. (ಆ.ಸು)	ಸದಸ್ಯ ಕಾರ್ಯದರ್ಶಿಗಳು

1.18 ಉನ್ನತ ಅಧಿಕಾರದ ಸಮನ್ವಯ ಸಮಿತಿಯ ಕರ್ತವ್ಯಗಳು ಮತ್ತು ಜವಾಬ್ದಾರಿಗಳು.

- ಉನ್ನತ ಅಧಿಕಾರದ ಸಮನ್ವಯ ಸಮಿತಿಯು ರಾಜ್ಯ ತರಬೇತಿ ಪರಿಷತ್ತಿಗೆ ನೆರವಾಗಲು ನೋಡಲ್ ಏಜೆನ್ಸಿಯಾಗಿರುತ್ತದೆ.
- ರಾಜ್ಯ ತರಬೇತಿ ನೀತಿಯ ಅನುಷ್ಠಾನದ ಮೇಲ್ವಿಚಾರಣೆ ಹೊಂದಿರುತ್ತದೆ.
- ಪ್ರತಿ ಇಲಾಖೆಯ ವಾರ್ಷಿಕ ತರಬೇತಿ ಕ್ರಿಯಾ ಯೋಜನೆಯನ್ನು ರೂಪಿಸುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು.

ಸರ್ಕಾರಿ ನೌಕರರಿಗೆ ತರಬೇತಿ ನೀಡುವ ಉದ್ದೇಶಗಳು:

1.19 ತರಬೇತಿಯು ಸರ್ಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳ ಮತ್ತು ಗುಂಪುಗಳ ವೃತ್ತಿ, ಜ್ಞಾನ, ಕುಶಲತೆ ಮತ್ತು ಸೇವಾ ಮನೋಭಾವನೆಯನ್ನು ಹೆಚ್ಚಿಸುವಂತಹ ಒಂದು ವ್ಯವಸ್ಥಿತ ಪ್ರಕ್ರಿಯೆ. ಫಲಿತಾಂಶ ಮತ್ತು ಸೇವೆಗಳ ಗುಣಾತ್ಮಕತೆಯನ್ನು ಹೆಚ್ಚಿಸುವ ಮೂಲಕ ಕಾರ್ಯಕ್ರಮಗಳ ಪರಿಣಾಮವನ್ನು ಮತ್ತು ಜವಾಬ್ದಾರಿಯನ್ನು ವೃದ್ಧಿಗೊಳಿಸಲು ತರಬೇತಿಯು ಅವರನ್ನು ಸಜ್ಜುಗೊಳಿಸುತ್ತದೆ. ಹೊಸ ಕಲ್ಪನೆಯ ಪರಿಚಯದಿಂದಾಗಿ ವಿಶಾಲ ದೃಷ್ಟಿ ಹಾಗೂ ಸರಿಯಾದ ಸೇವಾ ಮನೋಭಾವನೆಯನ್ನು ವೃದ್ಧಿಗೊಳಿಸಲು ಅನುವಾಗುವುದು.

1.20 ಈ ಕೆಳಕಂಡವುಗಳು ತರಬೇತಿಯ ಫಲಿತಾಂಶಗಳಾಗಬೇಕು:

ಅ) ಸಿಬ್ಬಂದಿಗಳ ಉತ್ತಮ ದಕ್ಷತೆ– ನೌಕರರ ಸಾಮರ್ಥ್ಯ ಅಭಿವೃದ್ಧಿ

ಆ) ಸರ್ಕಾರದ ಘನತೆಯನ್ನು ಹೆಚ್ಚಿಸುವುದು.

ಇ) ಸಾರ್ವಜನಿಕ ಅವಶ್ಯಕತೆಗಳಿಗೆ ಉತ್ತಮವಾಗಿ ಸ್ಪಂದಿಸುವುದು.

ಈ) ಉತ್ತಮ ಆಡಳಿತ

ತರಬೇತಿ ಕಾರ್ಯಕ್ರಮಗಳಲ್ಲಿ ಇರಬೇಕಾದ ಕಾಳಜಿ

1.21 ಸರ್ಕಾರಿ ನೌಕರರ ತರಬೇತಿಗಳಲ್ಲಿ ಈ ಮುಂದೆ ಹೇಳಿರುವಂತೆ ಕಳಕಳಿ ಇರಬೇಕು.

ಅ) ವೈಯಕ್ತಿಕ ಅಭಿವೃದ್ಧಿ ಯೋಜನೆ ಮತ್ತು ವೃತ್ತಿ ಅಭಿವೃದ್ಧಿ ಯೋಜನೆ. ಇದರಿಂದ ಅವರ ಕಾರ್ಯವನ್ನು ಉತ್ತಮವಾಗಿ ಕಾರ್ಯಗತಗೊಳಿಸಲು ಮತ್ತು ಉನ್ನತ ಕಾರ್ಯ ನಿರ್ವಹಣೆಗೆ ಪ್ರೇರಣೆ ದೊರೆಯುತ್ತದೆ.

ಆ) ಪ್ರಜಾತಂತ್ರ ಮೌಲ್ಯಗಳಿಗೆ ಮತ್ತು ಪಾಲುಗಾರಿಕೆ ಕಲ್ಪನೆಗೆ ಹಾಗೂ ಭಾಗವಹಿಸುವಿಕೆಯ ಮೂಲಕ ತೀರ್ಮಾನ ಕೈಗೊಳ್ಳುವುದು ಮತ್ತು ಬದ್ಧವಾಗಿರುವುದು.

ಇ) ತಂತ್ರಜ್ಞಾನ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಅರಿವು ಮೂಡುವುದು.

ಈ) ಸವಾಲೆನಿಸುವ ಪ್ರಜಾತಂತ್ರ ಅವಶ್ಯಕತೆ ಮತ್ತು ಜನರ ನಿರೀಕ್ಷೆ ಹಾಗೂ ಸಂಸ್ಥೆಯ ಮತ್ತು ತಾಂತ್ರಿಕ ಅಭಿವೃದ್ಧಿಗಳಿಗೆ ಸ್ಪಂದಿಸಲು ಅವಕಾಶವಾಗುವುದು.

ಉ) ವೃತಿಪರ ಕ್ಷೇತ್ರದಲ್ಲಿ ಉನ್ನತ ಕಾರ್ಯ ನಿರ್ವಹಣೆ ಮತ್ತು ಕಡಿಮೆ ವೆಚ್ಚದಲ್ಲಿ ಉತ್ತಮ ರೀತಿಯ ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವ ವಿಧಾನಗಳನ್ನು ಸುನಿಶ್ಚಿತಗೊಳಿಸಲು.

ಊ) ಸರಿಯಾದ ಮನೋಭಾವ ಬದಲಾವಣೆಯನ್ನು ತರಲು ಅವಕಾಶವಾಗುವುದು.

ನೀತಿ ಮತ್ತು ಮೌಲ್ಯಗಳು:

1.22 ಸಮಾಜದ ಎಲ್ಲಾ ಉದ್ಭವಿಸುತ್ತಿರುವ ವಿಷಯಗಳ ಮೇಲೆ ಒತ್ತು ನೀಡಲು ಹಾಗೂ ಸ್ನೇಹಪರ ಮತ್ತು ಆರೋಗ್ಯಕರ ಆಡಳಿತ ವಾತಾವರಣವನ್ನು ನಿರ್ಮಿಸಲು, ತರಬೇತಿ ಕಾರ್ಯಕ್ರಮಗಳ ನೀತಿ ಮತ್ತು ಮೌಲ್ಯಗಳಿಗೆ ಒತ್ತು ನೀಡಲಾಗುವುದು.

II. ತರಬೇತಿ ಕಾರ್ಯ ತಂತ್ರ:

II.1 ತರಬೇತಿ ಕಾರ್ಯ ತಂತ್ರ ಈ ಕೆಳಗಿನವುಗಳನ್ನು ಒಳಗೊಂಡಿರಬೇಕು.

ಅ) ತರಬೇತಿಯ ಯೋಜನೆ ಮತ್ತು ಆಯವ್ಯಯ / ಹಣಕಾಸು ಹಂಚುವಿಕೆ.

ಆ) ತರಬೇತಿ ವಿನ್ಯಾಸ ಮಾರ್ಗದರ್ಶಿಗಳನ್ನು ರೂಪಿಸುವುದು.

ಇ) ತರಬೇತಿ ಅಂಕಿ ಅಂಶಗಳ ಸಂಗ್ರಹ, ನಿರ್ವಹಣೆ ಮಾಡುವುದು ಮತ್ತು ಅಭಿವೃದ್ಧಿ ಪಡಿಸುವುದು.

ಈ) ತರಬೇತಿ ವಿಷಯಗಳಿಗೆ ಸಂಬಂಧಪಟ್ಟಂತೆ ಸಲಹೆಗಳನ್ನು ನೀಡುವುದು.

ಉ) ಮೇಲ್ವಿಚಾರಣೆ ಮತ್ತು ನಿರಂತರ ಅಭಿವೃದ್ಧಿಯ ಮೌಲ್ಯಮಾಪನ

II. 2. ತರಬೇತಿ ಸ್ಥಳ

ತರಬೇತಿ ಸಂಸ್ಥೆಗಳಲ್ಲಿ, ಕೆಲಸದ ಸ್ಥಳದಲ್ಲಿಯೇ ಮತ್ತು /ಅಥವಾ ವಿಕೇಂದ್ರೀಕೃತವಾಗಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಅಥವಾ ದೂರಕಲಿಕೆಯ ಮುಖಾಂತರ, ಕಡಿಮೆ ವೆಚ್ಚದಲ್ಲಿ ಉತ್ತಮ ಫಲಿತಾಂಶ ದೊರೆಯಲು, ಲಭ್ಯವಿರುವ ಭೌತಿಕ ಮೂಲಭೂತ ತರಬೇತಿ ಸೌಕರ್ಯಗಳು, ಪ್ರಶಿಕ್ಷಣಾರ್ಥಿಗಳನ್ನು ತರಬೇತಿಗೆ ಬಿಡುಗಡೆಗೊಳಿಸುವ ಲಭ್ಯ ಸಾಮರ್ಥ್ಯ ಮತ್ತು ಆಯ್ಕೆಯನ್ನು ಹಾಗೂ ಪ್ರಶಿಕ್ಷಣಾರ್ಥಿಗಳ ಅವಶ್ಯಕತೆಗಳಿಗನುಗುಣವಾಗಿ ತರಬೇತಿ ಸ್ಥಳಗಳನ್ನು ಗುರುತಿಸಲಾಗುವುದು.

II.3. ಇಲಾಖೆಗಳು ಪರಿಣಾಮಕಾರಿ ತರಬೇತಿಗಾಗಿ ತಮ್ಮ ನೌಕರರನ್ನು ನಿಯೋಜಿಸುವುದಕ್ಕಾಗಿ ಸಮರ್ಥ ಸರ್ಕಾರೇತರ ಸಂಘ ಸಂಸ್ಥೆಗಳನ್ನು ಮತ್ತು ಪ್ರಖ್ಯಾತ ಖಾಸತಿ ತರಬೇತಿ ಸಂಸ್ಥೆಗಳನ್ನು ಸಹ ಗುರುತಿಸಬಹುದು.

II. 4. ಸೇವೆಗೆ ಸೇರುವ ಕಾಲದ ತರಬೇತಿ, ವೃತ್ತಿ ತರಬೇತಿ ಮತ್ತು ನಿರ್ವಾಹಕ ತರಬೇತಿ ಇವುಗಳನ್ನು ಒಳಗೊಂಡ ಸಮಗ್ರ ತರಬೇತಿ ಕಾರ್ಯಕ್ರಮವನ್ನು ಅಧಿಕಾರಿಗಳಿಗೆ ನೀಡಬೇಕು. ಇವುಗಳನ್ನು ಉದ್ಯೋಗ ತಂಬೇತಿಯೊಂದಿಗೆ ಹೆಚ್ಚುವರಿಯಾಗಿ ನೀಡಬೇಕು.

II. 5. ಇಲಾಖೆಗಳು ಪರಿಣಾಮಕಾತಿ ತರಬೇತಿಗಾಗಿ ತಮ್ಮ ನೌಕರರನ್ನು ನಿಯೋಜಿಸುವುದಕ್ಕಾಗಿ ದಕ್ಷ ಮತ್ತು ಪ್ರಖ್ಯಾತ ತರಬೇತಿ ಸಂಸ್ಥೆಗಳನ್ನು ಸಹ ಗುರುತಿಸಬಹುದು.

II. 6. ಸಂಪರ್ಕ ಜಾಲ :

ರಾಜ್ಯದಲ್ಲಿನ ವಿವಿಧ ತರಬೇತಿ ಸಂಸ್ಥೆಗಳೊಂದಿಗೆ ತರಬೇತಿ ಜಾಲವಿರುವುದು. ತರಬೇತಿ ಸಂಸ್ಥೆಗಳು ಮತ್ತು ಇಲಾಖೆಗಳು, ಮಾನವ ಮತ್ತು ಸಾಮಗ್ರಿ ಸಂಪನ್ಮೂಲಗಳ ಬಳಕೆಯಲ್ಲಿ ಗರಿಷ್ಟಕ್ಕೇರಿಸುವ ಹಾಗೆ ಖಚಿತಪಡಿಸುವಂತಹ ಸಂಪರ್ಕ ಜಾಲವನ್ನು ರೂಪಿಸಬೇಕು. ತರಬೇತಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಪರಿಣತೆ ಮತ್ತು ವೃತ್ತಿ ಪರತೆಯು ನಿರಂತರವಾಗಿ ಮುಂದುವರೆಯುವಂತೆ ನೋಡಿಕೊಳ್ಳಲು ತರಬೇತಿ ಸಂಸ್ಥೆಗಳ ನಡುವೆ ಬೋಧನಾಂಗದ ವಿನಿಮಯ, ಭೇಟಿಗಳು ಹಾಗೂ ಇತರ ರೀತಿಯ ಪರಸ್ಪರ ಸಂವಾದಗಳನ್ನು ಏರ್ಪಡಿಸಲು ಪ್ರಯತ್ನಿಸುವುದು.

II. 7 ತರಬೇತಿ ವ್ಯಾಪ್ತಿ:

ರಾಜ್ಯದ ಎಲ್ಲಾ ನೌಕರರಿಗೆ (ತಳಮಟ್ಟದಿಂದ ಮೇಲ್ಮಟ್ಟದ ಎಲ್ಲಾ ವರ್ಗದವರಿಗೆ) ತರಬೇತಿಯನ್ನು ಏರ್ಪಡಿಸಬೇಕು. ಸಾರ್ವಜನಿಕ ಸಂಪರ್ಕ ಹೆಚ್ಚಾಗಿರುವ ನಿರ್ಣಾಯಕ ಹಂತದಲ್ಲಿರುವ ನೌಕರರ ತರಬೇತಿಗೆ ವಿಶೇಷ ಗಮನ ನೀಡಬೇಕಾಗಿದೆ. ಸರ್ಕಾರಿ ನೌಕರರು ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವ ರೀತಿ ನೀತಿಯ ಆಧಾರದ ಮೇಲೆ ಸಾರ್ವಜನಿಕರುಸರ್ಕಾರವು ಹೇಗೆ ಕೆಲಸ ನಿರ್ವಹಿಸುತ್ತಿದೆ ಎಂಬುದನ್ನು ಗ್ರಹಿಸುತ್ತಾರೆ.

II. 8 ಸರ್ಕಾರವು ನೀಡುವ ತರಬೇತಿಯು ಸಾಂಘಿಕ ಉತ್ಪನ್ನ, ದಕ್ಷತೆ ಹಾಗೂ ಪ್ರತಿಯೊಬ್ಬ ನೌಕರರನ ಜ್ಞಾನವನ್ನು ಹೆಚ್ಚಿಸುವ ಉದ್ದೇಶಗಳನ್ನು ಸಾಧಿಸುತ್ತದೆ. ಅದುದರಿಂದ ತರಬೇತಿಯು ನೌಕರರ ವೈಯಕ್ತಿಕ ಅಭಿವೃದ್ಧಿ ಮತ್ತು ಸಾಂಘಿಕ ಅಭಿವೃದ್ಧಿಗೆ ಸ್ಪಂದಿಸುವುದು ಮುಖ್ಯವಾಗಿರುತ್ತದೆ.

i. ತಳಮಟ್ಟದ ನೌಕರರು : ಕಾರ್ಯಕೌಶಲ್ಯಗಳ ಮೇಲೆ ತರಬೇತಿ ಕೇಂದ್ರೀಕೃತವಾಗಿರಬೇಕು.

ii. ಉಸ್ತುವಾರಿ ಮಟ್ಟ : ನಿರ್ವಹಣೆ, ಸಹಕಾರ, ಉಸ್ತುವಾರಿ ಮತ್ತು ಮೇಲ್ವಿಚಾರಣೆಯ ಮೇಲೆ ಕೇಂದ್ರೀಕೃತವಾಗಿರಬೇಕು.

iii. ಮಧ್ಯಂತರ ನಿರ್ವಹಣಾ ಮಟ್ಟ : ಪ್ರಾಯೋಜನೆ ನಿರ್ವಹಣೆ ; ಸಮನ್ವಯ 'ಅಂತರ್ ವ್ಯಕ್ತಿ' ಮತ್ತು 'ಅಂತರ ಇಲಾಖೆಗಳ' ನಿರ್ವಹಣಾ ಕಾರ್ಯಗಳ ಸಂಬಂಧಗಳ ಮೇಲೆ ಕೇಂದ್ರೀಕೃತವಾಗಿರಬೇಕು.

iv. ಉನ್ನತ ನಿರ್ವಹಣಾ ಮಟ್ಟ : ನೀತಿಯ ವಿಶ್ಲೇಷಣೆ, ಯೋಜನೆ, ಪ್ರಾಯೋಜನಾ ನಿರ್ವಹಣೆ, ಹಣಕಾಸು ನಿರ್ವಹಣೆ, ನಾಯಕತ್ವ, ಕೌಶಲ್ಯ, ಬದಲಾಯುತ ನಿರ್ವಹಣಾ ಕೌಶಲ್ಯ, ಗೊಂದಲ ನಿರ್ವಹಣೆ ಮತ್ತು ನಿವಾರಣೆ, ಸಾರ್ವಜನಿಕ ಖಾಸಗಿ ನಿರ್ವಹಣಾ ಕೌಶಲ್ಯಗಳು, ಆವಿಷ್ಕಾರಿಕ ಕೌಶಲ್ಯಗಳು, ಇವುಗಳ ಮೇಲೆ ತರಬೇತಿಯು ಕೇಂದ್ರೀಕೃತವಾಗಿರಬೇಕು.

v. ಇಲಾಖೆಗಳು ತಮ್ಮ ಇಲಾಖಾ ನಿರ್ವಹಣಾ ನೈಪುಣ್ಯತೆ ಕುರಿತಂತೆ ತರಬೇತಿ ರೂಪಿಸಬೇಕು.

ಪದೋನ್ನತಿಯ ಪ್ರತಿ ಹಂತದಲ್ಲಿ, ತರಬೇತಿಯು ಕಡ್ಡಾಯವಾಗಿರಬೇಕು. 'ಡಿ' ವೃಂದದಿಂದ 'ಸಿ' ವೃಂದಕ್ಕೆ ಪದೋನ್ನತಿಯಾದಾಗ ಅಂದರೆ ನಿರ್ವಹಣೆಯ ಹಂತಕ್ಕೆ ಪದೋನ್ನತಿ, 'ಸಿ' ವೃಂದದಿಂದ 'ಬಿ' ವೃಂದಕ್ಕೆ ಮತ್ತು 'ಬಿ' ವೃಂದದಿಂದ 'ಎ' ವೃಂದಕ್ಕೆ ಪದೋನ್ನತಿಯಾದಾಗ, ಮುಂತಾದ ಮಹತ್ತರ ಜವಾಬ್ದಾರಿ ಬದಲಾವಣೆಗಳಾದಾಗ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ಪರಿಗಣಿಸಬೇಕು.

II. 9 ತರಬೇತಿ ಚೌಕಟ್ಟು:

ಎ, ಬಿ ಮತ್ತು ಸಿ ವೃಂದದವರ ನೇಮಕಾತಿಯಾದ ತಕ್ಷಣ ಇಲಾಖೆಗಳಿಗೆ ನೇಮಿಸುವ ಮುನ್ನ ಕಡ್ಡಾಯ ವೃತ್ತಿ ಬುನಾದಿ ತರಬೇತಿಯನ್ನು ನೀಡುವುದು.

II.10 ನಾಲ್ಕು ಹಂತದ ತರಬೇತಿ ವಿಧಾನ:

ಹಂತಗಳು:

i. ಬುನಾದಿ : ಸೇವೆಗೆ ಸೇರ್ಪಡೆಯಾದ ತಕ್ಷಣ ನೌಕರರಿಗೆ ಸರ್ಕಾರದ ಕಾರ್ಯವೈಖರಿ, ನಿಯಮ, ಕಾನೂನು ಮತ್ತು ಕಾರ್ಯವಿಧಾನಗಳನ್ನು ಪರಿಚಯಿಸಲು ವೃತ್ತಿಗೆ ಸಂಬಂಧಪಟ್ಟ ವೃತ್ತಿ ತರಬೇತಿಯನ್ನು ನೀಡಬೇಕು (6 ರಿಂದ 8 ವಾರಗಳು)

ii. ಕಾರ್ಯ ವೈಖರಿ : 9 ರಿಂದ 16 ವರ್ಷಗಳ ಸೇವೆ ಸಲ್ಲಿಸಿದವರಿಗೆ (3 ವಾರಗಳು), ಅದರಲ್ಲಿ 1 ವಾರ ಕ್ಷೇತ್ರ ಭೇಟಿ ಆಡಳಿತ ಕಾನೂನು, ಪ್ರಾಯೋಜನೆ ನಿರ್ವಹಣೆ, ಹೊಸ ನೀತಿಗಳ ಮತ್ತು ಸರ್ಕಾರದ ಯೋಜನೆಗಳನ್ನು ಈ ಹಂತದ ತರಬೇತಿಯಲ್ಲಿ ಸೇರಿಸಬೇಕು.

iii. ನಿರ್ವಹಣೆ : 16 ರಿಂದ 25 ವರ್ಷ ಸೇವೆ ಸಲ್ಲಿಸಿದ ಅಧಿಕಾರಿಗಳಿಗೆ 3 ವಾರಗಳ ತರಬೇತಿ– ಅದರಲ್ಲಿ ಒಂದು ವಾರ ಕ್ಷೇತ್ರ ಭೇಟಿ ಸಮಸ್ಯೆಗಳನ್ನು ಪರಿಹರಿಸುವುದು, ನಿರ್ಧಾರ ತೆಗೆದುಕೊಳ್ಳುವುದು, ಸಾರ್ವಜನಿಕ ಖಾಸಗಿ ಸಹಭಾಗಿತ್ವ, ಉಸ್ತುವಾರಿ ಮತ್ತು ಮೌಲ್ಯಮಾಪನ ಕುರಿತು ವಿಷಯಗಳನ್ನು ಈ ತರಬೇತಿಯಲ್ಲಿ ಸೇರಿಸುವುದು.

iv. ವೃತ್ತಿ ಆಧಾರಿತ : ಪ್ರಸ್ತುತ ವೃತ್ತಿಗೆ ಸಂಬಂಧಿಸಿದಂತೆ ಅವಶ್ಯಕತೆ ಆಧಾರಿತ ತರಬೇತಿಯನ್ನು ನೀಡಬೇಕು. ಎಲ್ಲಾ ಹಂತದ ತರಬೇತಿಗಳು ಗಣಕಯಂತ್ರ ಪರಿಣಿತಿ ಕಾರ್ಯಕ್ರಮವನ್ನು ಒಳಗೊಂಡಿರಬೇಕು.

ಸೂಕ್ತ ತರಬೇತಿಗಾಗಿ ರಾಜ್ಯ ಸರ್ಕಾರಿ ನೌಕರರನ್ನು 4 ಹಂತಗಳಲ್ಲಿ ವಿಂಗಡಿಸಬಹುದು.

ಅ) ಉನ್ನತ ಮಟ್ಟದ 'ಎ' ವೃಂದ (ಉನ್ನತ ಆಡಳಿತ / ನಿರ್ವಹಣೆ ಮಟ್ಟ ಒಳಗೊಂಡಂತೆ).

ಆ) ಮೇಲ್ವಿಚಾರಣೆ ಹಂತ ಮತ್ತು ಮಧ್ಯಮ ಕಾರ್ಯ ನಿರ್ವಹಣೆ – 'ಬಿ' ವೃಂದದ ಅಧಿಕಾರಿಗಳು

ಇ) ತಳ ಹಂತದ 'ಸಿ' ವೃಂದದ ನೌಕರರು.

ಈ) ಸರ್ಕಾರದ 'ಡಿ' ವೃಂದದ ನೌಕರರು.

ಸರ್ಕಾರವು ಹೊಸ ಯೋಜನೆಗಳನ್ನು ಜಾರಿಗೊಳಿಸುವ ಮುನ್ನ ಅದಕ್ಕೆ ಸಂಬಂಧಿಸಿದ ನೌಕರರ ತರಬೇತಿಗೆ ಅವಕಾಶವನ್ನು ಕಲ್ಪಿಸಬೇಕು. ಇಲಾಖೆಗಳು ಸಂಬಂಧಪಟ್ಟ ತರಬೇತಿ ಸಂಸ್ಥೆಗಳನ್ನು (ಆಡಳಿತ ತರಬೇತಿ ಸಂಸ್ಥೆ ಮತ್ತು ಇತರೆ ಸಂಸ್ಥೆಗಳನ್ನು) ತರಬೇತಿ ಹೊಂದಬೇಕಾದ ನೌಕರರ ಸಂಖ್ಯೆ, ಅಳವಡಿಸಬೇಕಾದ ತರಬೇತಿ ಕಾರ್ಯಕ್ರಮಗಳ ಸಂಖ್ಯೆ ಮತ್ತು ಬಗ್ಗೆ ವರ್ಷದ ಯಾವ ಸಮಯದಲ್ಲಿ ನೌಕರರನ್ನು ತರಬೇತಿಗೆ ಕಳುಹಿಸಲಾಗುವುದು ಎಂಬ ಬಗ್ಗೆ ಸಮಾಲೋಚಿಸಬೇಕು.

ಒತ್ತು ನೀಡಬೇಕಾದ ವಿಷಯಗಳು:

II.11 ಕಾರ್ಯಕ್ಷಮತೆಯ ಅಭಿವೃದ್ಧಿ:

ಕಾರ್ಯಸಾಮರ್ಥ್ಯತೆ ಮತ್ತು ವೃತ್ತಿ ಸಾಮರ್ಥ್ಯತೆಗಳನ್ನೊಳಗೊಂಡ "ಕಾರ್ಯಕ್ಷಮತೆ" ಆಧಾರಿತ ತರಬೇತಿ ಕಾರ್ಯಕ್ರಮವನ್ನು ರಾಜ್ಯವು ಕೈಗೆತ್ತಿಕೊಳ್ಳುವುದು. ಆಡಳಿತದಲ್ಲಿ ನಿರ್ವಹಣೆ ಮತ್ತು ಅಭಿವೃದ್ಧಿ ದೃಷ್ಟಿಕೋನದ ಮೇಲೆ ತರಬೇತಿಯನ್ನು ಕೇಂದ್ರೀಕರಿಸಬೇಕು. ಮನೋಭಾವ, ನಾಯಕತ್ವ ಮತ್ತು ವರ್ತನೆಗಳು, ಹಾಗೂ ಕೌಶಲ್ಯಾಭಿವೃದ್ಧಿ ಮೇಲೆ ಕೇಂದ್ರೀಕರಿಸಬೇಕು.

"ವೃತ್ತಿ ಸಾಮರ್ಥ್ಯತೆ" ಗೆ ಈ ಕೆಳಗಿನವುಗಳು ಬೇಕಾಗುತ್ತವೆ.

ಅ) ಯೋಜನೆ ಮತ್ತು ನಿರ್ವಹಣೆ

ಆ) ಸಮಸ್ಯೆ ಪರಿಹಾರ ಮತ್ತು ತೀರ್ಮಾನ ಕೈಗೊಳ್ಳುವಿಕೆ.

ಇ) ವಿಶ್ಲೇಷಣಾತ್ಮಕ ಆಲೋಚನೆ

ಈ) ಪರಿಣಾಮಕಾರಿ ಸಂವಹನ

ಉ) ಸಾರ್ವಜನಿಕ ನೀತಿ ಜಾರಿಗೊಳಿಸುವ ಕಾರ್ಯತಂತ್ರ

ಊ) ಗಣಕ ಯಂತ್ರ ಪ್ರಯೋಗಶಾಲೆ.

ಪ್ರತಿ ಹಂತದ ನೌಕರರ " ಕಾರ್ಯಕ್ಷಮತೆ ಕಾರ್ಯತಂತ್ರ" ತರಬೇತಿ ಕೋಶ, ನಿರ್ಧರಿಸುವಲ್ಲಿ ಮಾನವ ಸಂಪನ್ಮೂಲ ಅಧಿಕಾರಿ / ಇಲಾಖೆಯ ಮುಖ್ಯಸ್ಥರು ಜವಾಬ್ದಾರಿ ಹೊಂದಿರುತ್ತಾರೆ. ಕಾರ್ಯತಂತ್ರವು ಪ್ರತಿ ಹಂತದ ಕಾರ್ಯ ನಿರ್ವಹಣೆಯ ಮತ್ತು ವೃತ್ತಿ ಅವಶ್ಯಕತೆಗಳನ್ನು ಸೂಚಿಸಬೇಕು.

ಅದೇ ರೀತಿ ಕಾರ್ಯ ನಿರ್ವಹಣೆ ಸಾಮರ್ಥ್ಯತೆಗೆ ಈ ಕೆಳಗಿನವುಗಳು ಬೇಕಾಗುತ್ತವೆ.

ಅ) ವೃತ್ತಿಪರ ತರಬೇತಿ

ಆ) ನೈಸರ್ಗಿಕ ಸಂಪನ್ಮೂಲ ನಿರ್ವಹಣೆ

ಇ) ವಿಪತ್ತು ನಿರ್ವಹಣೆ

ಈ) ಗಣಕ ಯಂತ್ರ ಪರಿಣಿತಿ ಇತ್ಯಾದಿ

ವೃತ್ತಿ ಕಾರ್ಯಕ್ಷಮತೆಗೆ ಕೌಶಲ್ಯ ಮತ್ತು ಕಾರ್ಯತಂತ್ರದ ಕ್ಷಮತೆ ಅಗತ್ಯವಿರುತ್ತದೆ. ಅದೇ ರೀತಿ ಕಾರ್ಯ ವೈಖರಿ ಮತ್ತು ಸಾಮರ್ಥ್ಯಾಭಿವೃದ್ಧಿಗೆ ಜ್ಞಾನವು ಅಗತ್ಯವಾಗಿರುತ್ತದೆ.

ಸಾಮರ್ಥ್ಯತೆಯ ತರಬೇತಿ ಮತ್ತು ಸಾಮರ್ಥ್ಯಾತ್ಮಕ ಅಭಿವೃದ್ಧಿ ಆಧಾರದ ಮೇಲೆ ಪ್ರತಿ ಇಲಾಖೆಯು ಪ್ರತಿ ಸಿಬ್ಬಂದಿಯ ಅಂಕಿ–ಅಂಶ ವಿವರಗಳನ್ನು ನಿರ್ವಹಿಸುವ ಮೂಲಕ ಮೇಲ್ವಿಚಾರಣೆ ತರಬೇತಿಯ ಅಗತ್ಯವನ್ನು ಪ್ರತಿ ವರ್ಷ ಮಾರ್ಚ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಸಂಬಂಧಪಟ್ಟ ಇಲಾಖೆಯು ಪರಿಶೀಲಿಸಬೇಕು ಮತ್ತು ಮೌಲ್ಯಮಾಪನ ಮಾಡಬೇಕು. ತಮ್ಮ ಮೂಲಕ ಆಗಿರುವ ಸುಧಾರಣೆಯನ್ನು ಪರಿಶೀಲನೆ ಮತ್ತು ಮೌಲ್ಯಮಾಪನದ ಮೂಲಕ ಇಲಾಖೆಯು ಉಸ್ತುವಾರಿ ಮಾಡಬಹುದಾಗಿರುತ್ತದೆ. ಪ್ರತಿ ಶ್ರೇಣಿಯಲ್ಲಿಯೂ 4–6 ವಿಷಯಗಳನ್ನು ಸಾಧನೆಯ ಸಲುವಾಗಿ ಗುರುತಿಸುವುದು. ಇದರಿಂದ ತರಬೇತಿ ಸಂಸ್ಥೆಗಳು ತರಬೇತಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲು ಸಾಧ್ಯವಾಗುತ್ತದೆ.

ಅಳವಡಿಸಿಕೊಳ್ಳುವ ಪ್ರಕ್ರಿಯೆ:

- ಪ್ರತಿ ಇಲಾಖೆಯು ಇಲಾಖೆಯ ರೋಡ್ ಮ್ಯಾಪ್ ಹಾಗೂ ತರಬೇತಿ ಅವಶ್ಯಕತೆ, ಹಾಗು ನೌಕರರ ತರಬೇತಿ ಬೇಡಿಕೆಗಳನ್ನು ನಿಗದಿಪಡಿಸಿಕೊಳ್ಳಬೇಕು.
- ಪ್ರತಿ ಇಲಾಖೆಯ ಪ್ರತಿ ಹಂತದ / ವೃಂದದ ನೌಕರರ "ಕಾರ್ಯಕ್ಷಮತೆಯ ಶ್ರೇಣಿ" ಯನ್ನು (ಕಾರ್ಯದ ಮತ್ತು ವೃತ್ತಿಯ) ಗುರುತಿಸುವುದು.
- ಸಾಮರ್ಥ್ಯದ ಕಾರ್ಯಕ್ಷಮತೆಯ ಅಭಿವೃದ್ಧಿಯನ್ನು ಆಯಾ ಇಲಾಖೆಯೇ ಕಾರ್ಯನಿರ್ವಹಣೆಯಲ್ಲಿ ಅಳವಡಿಸಿಕೊಳ್ಳುವುದು.
- ಅಂಕಿ–ಅಂಶ ವಿವರಣೆಯನ್ನು (ಮಾನವ ಸಂಪನ್ಮೂಲ ನಿರ್ವಹಣೆ ಕ್ರಮದ ಆಧಾರದ ಮೇಲೆ) ಇಲಾಖಾ ಹಂತದಲ್ಲಿ / ಉಪ ಇಲಾಖಾ ಹಂತದಲ್ಲಿ, ಸಾಧನೆಗಳನ್ನು ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡಲು ನಿರ್ವಹಣೆ ಮಾಡಲಾಗುವುದು.
- "ಸಾಮರ್ಥ್ಯ ಕಾರ್ಯಕ್ಷಮತೆ ಅಭಿವೃದ್ಧಿ" ಸಾಧಿಸಲು ತರಬೇತಿ ಸಂಸ್ಥೆಗಳನ್ನು (ಸರ್ಕಾರಿ/ ಖಾಸಗಿ / ಸರ್ಕಾರೇತರ) ಇಲಾಖೆಯು ಗುರುತಿಸುವುದು.

ತೀವ್ರತರ ತರಬೇತಿಗಾಗಿ ಗುರುತಿಸಲಾದ ವಲಯಗಳು:

ಇಲಾಖೆಗಳಿಗೆ ತರಬೇತಿ ನೀತಿಯನ್ನು ವಿನ್ಯಾಸಗೊಳಿಸುವುದು.

II.12 ಆರೋಗ್ಯ, ಕಂದಾಯ, ಕೃಷಿ, ಶಿಕ್ಷಣ, ಪೊಲೀಸ್, ಮಹಿಳಾ ಮತ್ತು ಮಕ್ಕಳಾಭಿವೃದ್ಧಿ, ನಗರ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳು, ಇಲಾಖೆಯ ಎಲ್ಲ ಹಂತದ ಸಿಬ್ಬಂದಿಗೆ ತೀವ್ರತರ ತರಬೇತಿ ನೀಡಲು, ತರಬೇತಿ ವಿನ್ಯಾಸಗಳನ್ನು ರೂಪಿಸಬೇಕು. ಈ ಇಲಾಖೆಗಳಲ್ಲಿ ಕೆಳ ಹಂತದಲ್ಲಿ ಸೇವೆಗಳನ್ನು ನೀಡುವ ಮತ್ತು ತನ್ಮೂಲಕ ಅಭಿವೃದ್ಧಿಯನ್ನು ಸಾಧಿಸಲು ವಿಪುಲವಾದ ಅವಕಾಶವಿದೆ.

ಅಧಿಕ ಮಾನವ ಶಕ್ತಿಯುಳ್ಳ ಇಲಾಖೆಗಳು ರಾಜ್ಯ ತರಬೇತಿ ನೀತಿಯ ಚೌಕಟ್ಟಿನೊಳಗೆ ತನ್ನ ತರಬೇತಿ ನೀತಿ ಹಾಗೂ ತರಬೇತಿ ಯೋಜನೆಯನ್ನು ಸಿದ್ಧಪಡಿಸಬೇಕು. ಇಲಾಖೆಗಳು ತಮ್ಮ ಇಲಾಖೆಗಳ ತಮ್ಮ ನಿರ್ದಿಷ್ಟ ಅವಶ್ಯಕತೆಗಳನ್ನು ಗುರುತಿಸಬೇಕು. ಇಲಾಖೆಗಳ ಕೌಶಲ್ಯ ಹಾಗೂ ಕಾರ್ಯಕ್ರಮಗಳನ್ನು ಒಳಗೊಂಡ ನಿರ್ದಿಷ್ಟ ತರಬೇತಿಯನ್ನು ವಿನ್ಯಾಸಗೊಳಿಸಬೇಕು.

ತೀವ್ರತರ ತರಬೇತಿಗಾಗಿ ಪ್ರಸ್ತಪಿಸಲಾದ ಕ್ಷೇತ್ರಗಳು:

II.13 ಎ) ಮಾಹಿತಿ ತಂತ್ರಜ್ಞಾನ

ಈ ಕೆಳಗಿನ ಉದ್ದೇಶಗಳನ್ನು ಸಾಧಿಸುವ ಸಲುವಾಗಿ ಸಂಬಂಧಿಸಿದ ತರಬೇತಿ ಕಾರ್ಯಕ್ರಮವು ಮಾಹಿತಿ ತಂತ್ರಜ್ಞಾನಕ್ಕೆ ಪ್ರಮುಖ ಮಾಹಿತಿಗಳನ್ನು ಒಳಗೊಂಡಿದೆ.

ಅ) ಸೇವೆಯನ್ನು ಒದಗಿಸುವ ಪ್ರಕ್ರಿಯೆಯನ್ನು ಸುಧಾರಿಸುವುದು.

ಆ) ಸಿಬ್ಬಂದಿ ವರ್ಗ ಮತ್ತು ಅಧಿಕಾರಿಗಳ ದಕ್ಷತೆಯನ್ನು ಹೆಚ್ಚಿಸಲು

ಇ) ಹೆಚ್ಚಿನ ಮಾಹಿತಿ ಪಡೆಯಲು ಅವಕಾಶ ಕಲ್ಪಿಸುವುದು.

ಬಿ) ವಿಕೇಂದ್ರೀಕೃತ ಯೋಜನೆ ಮತ್ತು ಅಭಿವೃದ್ಧಿ :

ವಿಕೇಂದ್ರೀಕರಣ ಮತ್ತು ಜನರ ಭಾಗವಹಿಸುವಿಕೆ ಕುರಿತಂತೆ ತಾತ್ವಿಕ ಮತ್ತು ಪ್ರಾಯೋಗಿಕ ವಿಷಯಗಳ ಮೇಲೆ ತರಬೇತಿ ಕಾರ್ಯಕ್ರಮಗಳು ಕೇಂದ್ರಿ ಕೃತವಾಗಿರಬೇಕು.

ಸಿ) ಆಡಳಿತ ಯಂತ್ರ ಮತ್ತು ನಿರ್ವಹಣೆ

ನಿಯಮ ಮತ್ತು ಕಾರ್ಯ ವಿಧಾನಗಳ ಜೊತೆಗೆ ಆಧುನಿಕ ನಿರ್ವಹಣೆ ತತ್ವಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಅಳವಡಿಸುವುದರ ಬಗ್ಗೆಯೂ ಸಹ ತರಬೇತಿ ಕಾರ್ಯಕ್ರಮಗಳು ಕೇಂದ್ರೀಕೃತವಾಗಿರಬೇಕು.

ಡಿ) ಸರಿಯಾದ ಯೋಜನೆಗಳನ್ನು ಸಿದ್ಧಪಡಿಸುವುದು, ಮೇಲ್ವಿಚಾರಣೆ ಮಾಡುವುದು ಮತ್ತು ಹಣಕಾಸು ನಿರ್ವಹಣೆ

ಇ) ಸಾರ್ವಜನಿಕ ನೀತಿ, ವಿಶ್ಲೇಷಣೆ ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವ ಒಳಗೊಂಡಂತೆ ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು.

ಎಫ್) ಮನೋಭಾವನೆ ಮತ್ತು ಬದಲಾವಣೆಯ ನಿರ್ವಹಣೆ

ಜಿ) ಮಾಹಿತಿ ಹಕ್ಕಿನ ಮುಖಾಂತರ ಸರ್ಕಾರದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವುದು.

ಹೆಚ್) ಸಾರ್ವಜನಿಕ ಖಾಸಗಿ, ಸಹಭಾಗಿತ್ವ ನೀತಿಯನ್ನು ಅಧ್ಯಯನ ಮಾಡಿ ಪರಿಣಾಮಕಾರಿಯಾಗಿ ಜಾರಿಗೊಳಿಸುವುದು.

ಐ) ಹಣಕಾಸು ನಿರ್ವಹಣೆ ಮುಂತಾದವು

ಜೆ) ಸಾರ್ವಜನಿಕ ನೀತಿಯಲ್ಲಿ ಲಿಂಗ ಸಂವೇದನೆ.

II. 14. ತಳ ಹಂತದ ನೌಕರರ ತರಬೇತಿ ಕಾರ್ಯಕ್ರಮಗಳಲ್ಲಿಯೂ ಸಹಾ, ಕಾರ್ಯಕುಶಲತೆ, ಮತ್ತು ಮನೋಭಾವ ಬದಲಾವಣೆಗೆ ಹೆಚ್ಚಿನ ಒತ್ತು ನೀಡುವುದು. ಮಧ್ಯಂತರ ಹಂತಕ್ಕೆ ಭವಿಷ್ಯದ ಕಾರ್ಯ ಮತ್ತು ಜವಾಬ್ದಾರಿಗೆ ಅವರನ್ನು ಸಜ್ಜುಗೊಳಿಸಲು ವೃತಿಪರ ಹಾಗೂ ತಾಂತ್ರಿಕ ಜ್ಞಾನದ ಅಭಿವೃದ್ಧಿ ಮತ್ತು ವೃತ್ತಿ ಜ್ಞಾನವನ್ನು ವಿಶಾಲಗೊಳಿಸುವ ನಿಟ್ಟಿನಲ್ಲಿ ತರಬೇತಿಯನ್ನು ವಿನ್ಯಾಸಗೊಳಿಸಬೇಕು. ಉನ್ನತ ಹಂತದ ತರಬೇತಿಯಲ್ಲಿ ನೀತಿ ನಿರೂಪಣೆಯಲ್ಲಿ ವಿವಿಧ ಕೋನದ ಸಂಬಂಧಗಳು, ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ ಮತ್ತು ತಂತ್ರಜ್ಞಾನದ ನಿಟ್ಟಿನಲ್ಲಿ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಲು ಮತ್ತು ತರಬೇತಿಯ ದೃಷ್ಟಿಕೋನವನ್ನು ತೀವ್ರಗೊಳಿಸುವುದು.

II.15. ಎಲ್ಲಾ ಹಂತದ ತರಬೇತಿಗಳಲ್ಲಿ ಬದಲಾಗುತ್ತಿರುವ ಸಂಸ್ಥೆಗಳ ಪರಿಸರವನ್ನು ಗಮನದಲ್ಲಿಟ್ಟುಕೊಂಡು ನಿರಂತರ ಮನೋಭಾವ ಬದಲಾವಣೆಗೆ ಅಸ್ಪದ ಮಾಡಿಕೊಡಬೇಕು.ಇದರಿಂದಾಗಿ ಸಿಬ್ಬಂದಿ ವರ್ಗವು ಸಾರ್ವಜನಿಕ ಹಕ್ಕುಗಳ ಬಗ್ಗೆ ಹೆಚ್ಚಿನ ಕಳಕಳಿ ಮತ್ತು ಇಡೀ ಜನಸಮುದಾಯವನ್ನು ಕೇಂದ್ರಬಿಂದುವಾಗಿಸಿ ಸಾರ್ವಜನಿಕ ಸೇವೆಯಲ್ಲಿ ಒದಗಿಸುವಂತಾಗಿರಬೇಕು. ಇದರಿಂದಾಗಿ ಸಂಸ್ಥೆಯು ಉತ್ತಮ ಸೇವಾ ಸಂಸ್ಕೃತಿಯನ್ನು ಬೆಳೆಸಲು ಸಾಧ್ಯವಾಗಬೇಕು. ಹಂತಗಳ ನಡುವಿನ ಸಂಬಂಧ ತಂಡದ ಕಾರ್ಯ ಮತ್ತು ಉಪ ಶಾಖೆಗಳೊಂದಿಗೆ ಸಂಯೋಜನೆ ಮತ್ತು ಪ್ರೇರಣೆಗೆ ಅನುವು ಮಾಡಿಕೊಡುವುದು. ಎಲ್ಲಾ ಭಾಗಿದಾರರಿಗೆ ವೃತ್ತಿಪರ ಸಾಧನೆ ಮತ್ತು ಕಾರ್ಯ ತೃಪ್ತಿ ಇವುಗಳನ್ನು ಅಭಿವೃದ್ಧಿಪಡಿಸಲು ನೆರವಾಗುವುದು.

ಸಂಸ್ಥೆಯ ತರಬೇತಿ ಅವಶ್ಯಕತೆಗಳನ್ನು ಗುರುತಿಸುವುದು:

II.16 ವರ್ಷದ ಪ್ರಾರಂಭದಲ್ಲಿ, ಪ್ರತಿ ಇಲಾಖೆಯು ಪ್ರತಿ ಹಂತದ ಅಧಿಕಾರಿಗಳಿಗೆ /ಸಿಬ್ಬಂದಿಗಳಿಗೆ ಅಗತ್ಯವಿರುವ, ಜ್ಞಾನ, ಕೌಶಲ್ಯ ಮತ್ತು ಸಾಮರ್ಥ್ಯತೆಯನ್ನು ಗುರುತಿಸಬೇಕು. ತರಬೇತಿ ಮತ್ತು ತರಬೇತಿಯೇತರ ನಿರ್ಧಿಷ್ಟ ಸಮಸ್ಯೆಗಳನ್ನು ಗುರುತಿಸಬೇಕು. ತರಬೇತಿ ಅವಶ್ಯಕತೆ ವಿಶ್ಲೇಷಣೆಯು, ಇತರ ಸಮಸ್ಯೆಗಳನ್ನು ಸಹ ಬೆಳಕಿಗೆ ತರುತ್ತದೆ. (ಇದಕ್ಕೆ ತರಬೇತಿ ಪರಿಹಾರ ಇಲ್ಲದೆ ಇರಬಹುದು). ಇಲಾಖೆಗಳು, ಈ ಸಮಸ್ಯೆಗಳನ್ನು ಪರಿಹರಿಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುವುದು.

ತರಬೇತಿ ವ್ಯವಸ್ಥಾಪಕರು:

II.17. ಪ್ರತಿ ಇಲಾಖೆಯಲ್ಲಿ ತರಬೇತಿ ಕೋಶವನ್ನು ಸೃಜಿಸಬೇಕು. ಈ ವಿಭಾಗವು ಇಲಾಖೆಯ ಪ್ರಸ್ತುತ ಮತ್ತು ಭವಿಷ್ಯದ ತರಬೇತಿ ಚಟುವಟಿಕೆಗಳನ್ನು ನಿರ್ವಹಿಸಲು ತರಬೇತುದಾರರನ್ನು ಹೊಂದಿರಬೇಕು. ಎಲ್ಲಿ 500 ಸಂಖ್ಯೆಗಿಂತ ಹೆಚ್ಚಿನ ನೌಕರರು ಇರುತ್ತಾರೋ, ಅಲ್ಲಿ ಪ್ರತಿ ಇಲಾಖೆಯು, ಇಲಾಖಾ ತರಬೇತಿ ವ್ಯವಸ್ಥಾಪಕರನ್ನು ಗುರುತಿಸಬೇಕು / ನಾಮ ನಿರ್ದೇಶನ ಮಾಡಬೇಕು. ತರಬೇತಿ ವ್ಯವಸ್ಥಾಪಕರು, ಅವರ ಇಲಾಖೆಗೆ ಸಂಬಂಧಿಸಿದಂತೆ, ತರಬೇತಿ ಅವಶ್ಯಕತೆಗಳನ್ನು ಗುರುತಿಸುವುದು, ಸಾಮರ್ಥ್ಯದ ಮಟ್ಟವನ್ನು ವಿನ್ಯಾಸಗೊಳಿಸುವುದು ಮತ್ತು ಪ್ರತಿ ನೌಕರರ ಕಾರ್ಯ ನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡುವುದು, ಮುಂತಾದ ಕಾರ್ಯಗಳನ್ನು ನಿರ್ವಹಿಸುವರು. 500ಕ್ಕಿಂತ ಕಡಿಮೆ ನೌಕರರಿರುವ ಇಲಾಖೆಯಲ್ಲಿ, ಆಡಳಿತ ಶಾಖೆಯ ಉನ್ನತ ಅಧಿಕಾರಿ, ತರಬೇತಿ ವ್ಯವಸ್ಥಾಪಕರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುತ್ತಾರೆ. (ಅನುಬಂಧ 1 ಮತ್ತು 2).

ಕಾರ್ಯ ವಿಶ್ಲೇಷಣೆ:

II.18. ತರಬೇತಿಯನ್ನು ವಿನ್ಯಾಸಗೊಳಿಸಲು, ಮತ್ತು ಕಾರ್ಯಗತಗೊಳಿಸಲು, ಸಾಮರ್ಥ್ಯತೆಯನ್ನು ಗುರುತಿಸುವುದು ಮತ್ತು ತರಬೇತಿ ಅವಶ್ಯಕತೆಗಳ ವಿಶ್ಲೇಷಣೆ ಇವು ಆಧಾರವಾಗಿರಬೇಕು. ತರಬೇತುದಾರರು ಮತ್ತು ಇಲಾಖಾ ತರಬೇತಿ ವ್ಯವಸ್ಥಾಪಕರು, ದೊರೆಯುವ ತರಬೇತಿ ಸಂಪನ್ಮೂಲಗಳ ಉತ್ತಮ ಬಳಕೆಯ ಯೋಜನೆಯಲ್ಲಿ ಕಾಳಜಿ ವಹಿಸಬೇಕು ಇಂತಹ ಚಟುವಟಿಕೆಗಳಲ್ಲಿ, ಅವಶ್ಯಕವಿದ್ದಲ್ಲಿ ತಜ್ಞರನ್ನು ತೊಡಗಿಸಿಕೊಳ್ಳಬಹುದು.

II.19. ವಿದೇಶ ತರಬೇತಿ:

'ಎ' ವೃಂದದ ಅಧಿಕಾರಿಗಳನ್ನು ಅವರ ಜ್ಞಾನ, ಕೌಶಲ್ಯ ಮತ್ತು ಮನೋಭಾವನೆಯನ್ನು ವೃದ್ಧಿಪಡಿಸಲು ತರಬೇತಿಗಾಗಿ ವಿದೇಶಗಳಿಗೆ ನಿಯೋಜಿಸಬಹುದು.

II.20. ತರಬೇತಿ ವಿಧಾನಗಳು:

ತರಬೇತಿಯ ವ್ಯವಸ್ಥಿತ ಪ್ರಸ್ತಾವನೆ

ಕಾರ್ಯದಕ್ಷತೆಯನ್ನು ಸುಧಾರಣೆಗೊಳಿಸುವುದು ಯಾವುದೇ ಸಂಸ್ಥೆ, ಇಲಾಖೆ ಅಥವಾ ವ್ಯಕ್ತಿಯಲ್ಲಿ ಇಂದು ತುಂಬಾ ಅವಶ್ಯಕತೆಯಾಗಿದೆ. ಆದ್ದರಿಂದ ವ್ಯವಸ್ಥಿತ ಪ್ರಸ್ತಾವನಾ ತರಬೇತಿಯ ಮೊದಲನೆಯ ಹಂತದಲ್ಲಿ, ಸಮಸ್ಯೆಗಳ ಸ್ವರೂಪ ಮತ್ತು ಕಾರ್ಯಕ್ಷಮತೆಯ ಅಂತರವನ್ನು ಸಾಧ್ಯವಾದಷ್ಟು ಕರಾರುವಾಕ್ಕಾಗಿ ಗುರುತಿಸಲು ವಿವಿಧ ಬಗೆಯ ವಿಶ್ಲೇಷಣಾ ಕ್ರಮಗಳನ್ನು ಬಳಸಬೇಕಾಗುತ್ತದೆ.

ಕಾರ್ಯಕ್ಷಮತೆಯನ್ನು ಸುಧಾರಿಸುವುದಕ್ಕೆ ಸಂಬಂಧಿಸಿದ ಕ್ಷೇತ್ರದ ಸಂಪೂರ್ಣ ವ್ಯಾಪ್ತಿಯನ್ನು ಒಮ್ಮೆ ಗುರುತಿಸಿದರೆ, ನೌಕರರ ತರಬೇತಿ ಅಗತ್ಯತೆ ಅಥವಾ ನೌಕರರ ಮಟ್ಟವನ್ನು ಗುರುತಿಸಬಹುದು. ಇದು ಸೂಕ್ತ ತರಬೇತಿ ಮಾಡ್ಯೂಲ್‌ಗಳನ್ನು ಯೋಜಿಸಿ ರೂಪಿಸುವುದಕ್ಕೆ ನೆಲೆಗಟ್ಟನ್ನು ಒದಗಿಸುತ್ತದೆ. ಕೆಲವು ಸಮಸ್ಯೆಗಳು ಮತ್ತು ಅಗತ್ಯತೆಗಳು ಹಾಲಿ ಇರುವ ತರಬೇತಿ ಉಪಬಂಧಗಳ ವ್ಯಾಪ್ತಿಯಲ್ಲಿ ಬರಬಹುದು ಮತ್ತು ಕೆಲವನ್ನು ಸುಲಭವಾಗಿ ನಿರ್ವಹಿಸಬಹುದು; ಇನ್ನು 'ಕೆಲವು ಸಮಸ್ಯೆಗಳಿಗೆ ವಿಶೇಷ ಗಮನವನ್ನು ನೀಡಬೇಕಾಗಬಹುದು. ಆದ್ದರಿಂದ ತರಬೇತಿಯ ವ್ಯವಸ್ಥಿತ ಪ್ರಸ್ತಾವನೆಯ ಅನುಷ್ಠಾನದಲ್ಲಿ, ಕೌಶಲಭರಿತ ಶಿಕ್ಷಣವನ್ನು ಒಳಗೊಂಡ, ತರಬೇತಿದಾರರ ಸಕ್ರಿಯ ಮತ್ತು ಉತ್ಸಾಹಪೂರ್ಣ ಪಾಲ್ಗೊಳ್ಳುವಿಕೆಯೊಂದಿಗೆ ಕಲಿಕಾ ಚಟುವಟಿಕೆಯನ್ನು ಒಳಗೊಂಡಿರುತ್ತದೆ.

II.21. ಕಡಿಮೆ ವೆಚ್ಚದಲ್ಲಿ ಉತ್ತಮ ಫಲಿತಾಂಶದ ವಿಶ್ಲೇಷಣೆ, ದೊರೆಯುವ ಭೌತಿಕ ತರಬೇತಿಯ ಮೂಲಭೂತ ಸೌಕರ್ಯಗಳು ಮತ್ತು ಪ್ರಶಿಕ್ಷಣಾರ್ಥಿಗಳ ಗುಂಪು, ಇವುಗಳ ಆಧಾರದ ಮೇಲೆ ಎಲ್ಲಾ ತರಬೇತಿಯ ವಿಧಾನಗಳಾದ ಕೆಲಸ ಮಾಡುತ್ತಿರುವ ಸ್ಥಳದಲ್ಲಿ ತರಬೇತಿ, ಬ್ರೇನ್ ಸ್ಟಾರ್ಮಿಂಗ್ ಉಪನ್ಯಾಸ, ಗುಂಪು ಚರ್ಚೆ, ಗುಂಪು ಅಭ್ಯಾಸಗಳು, ಪ್ರಕರಣಗಳ ಆದ್ಯಯನ, ಪಾತ್ರ ನಿರ್ವಹಣೆ, ವಿಚಾರಗೋಷ್ಠಿ, ಬಾಗಿಲು ಹಂತದ ತರಬೇತಿ, ಕಾರ್ಯಾಗಾರ, ಕ್ಷೇತ್ರಭೇಟಿ, ಗಣಕ ಆಧಾರಿತ ತರಬೇತಿ, ದೂರಕಲಿಕೆ ವಿಧಾನ ಮುಂತಾದವುಗಳನ್ನು ಬಳಸಬಹುದು.

ಮೇಲೆ ಕಾಣಿಸಿದ ವಿಧಾನಗಳು, ಮನೋಭಾವ ತರಬೇತಿ ಮತ್ತು ಅಂತರ ವ್ಯಕ್ತಿ ಹಾಗೂ ಸಮನ್ವಯ ಕೌಶಲ್ಯಗಳನ್ನು ನೀಡಲು ಮತ್ತು ಅಭಿವೃದ್ಧಿಪಡಿಸಲು ಸಹಾಯಕವಾಗುವುದು. ತರಬೇತಿಯಿಂದ ಇಲಾಖೆಯ, ಸಂಸ್ಥೆಯ, ವ್ಯಕ್ತಿಯ ಕಾರ್ಯಚರಣೆಯನ್ನು ಸುಧಾರಿಸುವುದು ಪ್ರಮುಖ ಗುರಿಯಾಗಿದೆ.

ಉಪಗ್ರಹ ಆಧಾರಿತ ದೂರಕಲಿಕೆ ಸಂಪರ್ಕ:

1) ಡಾ.ವಿ.ಹೆಚ್.ಹೆಚ್. ಸುರೇಂದ್ರ, ಕಾರ್ಖಾನೆಗಳ ಜಂಟಿ ನಿರ್ದೇಶಕರು (ವೈದ್ಯಕೀಯ) ಮತ್ತು ಶ್ರೀ. ಎ.ಆರ್. ವಿಜಯೇಂದ್ರ ಕಾರ್ಖಾನೆಗಳ ಜಂಟಿ ನಿರ್ದೇಶಕರು–1, ಇವರಿಬ್ಬರೂ ಮುಂಬಡ್ತಿ ಹೊಂದಿದ ನಂತರ ದಿನಾಂಕ 18.09.2006ರ ಅಪರಾಹ್ನ ವರದಿ ಮಾಡಿಕೊಂಡಿರುತ್ತಾರೆ. ಇವರ ಹೆಸರಿನ ಮುಂದೆ ವರದಿ ಮಾಡಿಕೊಂಡ ದಿನಾಂಕವನ್ನು ತೋರಿಸಿದಾಗ ಶ್ರೀ ಎ.ಆರ್.ವಿಜಯೇಂದ್ರ, ಇವರ ಹೆಸರಿನ ಮುಂದೆ ದಿನಾಂಕ 18.09.2006 ಎಂದು, ಡಾ.ವಿ.ಹೆಚ್.ಹೆಚ್. ಸುರೇಂದ್ರ ಇವರ ಹೆಸರಿನ ಮುಂದೆ 19.09.2006 ಎಂದು ನಮೂದಾಗಿದ್ದು ಇಬ್ಬರಿಗೂ ಒಂದೇ ದಿನಾಂಕವನ್ನು ನಮೂದಿಸಬೇಕಾಗಿರುತ್ತದೆ.

2) ಶ್ರೀ. ಕೆ.ವಿ ಚಂದ್ರಮೌಳಿ, ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರು, ಇವರು ಈ ವೃಂದಕ್ಕೆ ಸೇರಿದ ದಿನಾಂಕ 02.06.1996 ಎಂದು ತಪ್ಪಾಗಿ ನಮೂದಿಸಲಾಗಿದ್ದು ಇದು 02.05.1996 ಎಂದು ಇರಬೇಕಾಗಿರುತ್ತದೆ.

3) ಶ್ರೀ. ರವೀಂದ್ರ ಎನ್.ರಾಥೋಡ್, ಕಾರ್ಖಾನೆಗಳ ಸಹಾಯಕ ನಿರ್ದೇಶಕರು ಹಾಗೂ ಶ್ರೀ. ಹೆಚ್.ಎಸ್.ನರೇಂದ್ರ ಬಾಬು, ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು ಇವರುಗಳು ಶ್ರೀ. ಟಿ.ವಿ. ನಾರಾಯಣಪ್ಪ, ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು ಹಾಗೂ ಶ್ರೀ. ಎ.ಜೆ. ಸತೀಶ್‌ಬಾಬು, ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರು, ಇವರುಗಳಿಗಿಂತ ಜೇಷ್ಠತೆಯಲ್ಲಿ ತಾವು ಮೇಲೆ ಇರಬೇಕು ಎನ್ನುವುದಾಗಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಅರ್ಜಿಯ ತೀರ್ಪಿಗೆ ಒಳಪಟ್ಟು ಈಗ ನಿಗದಿಪಡಿಸಿರುವ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿದೆ ಎನ್ನುವುದಾಗಿ ನಮೂದಿಸಬೇಕಾಗಿರುತ್ತದೆ.

ಇದನ್ನು ಪರಿಶೀಲಿಸಿ ಅನುಬಂಧದ 1 ರಿಂದ 11ರಲ್ಲಿ ನಮೂದಿಸಿರುವಂತೆ ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಅಧಿಕಾರಿಗಳ ದಿನಾಂಕ 01.01.2007ರಂದು ಇದ್ದಂತೆ ಅಂತಿಮ ಜೇಷ್ಠತಾ ಪಟ್ಟಿಯನ್ನು ಈ ಮೂಲಕ ಪ್ರಕಟಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಶಿವರಾಮ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ
(ಕಾರ್ಖಾನೆ ಮತ್ತು ಬಾಯ್ಲರುಗಳು)

ಅನುಬಂಧ –1

ಕಾರ್ಖಾನೆಗಳ ಜಂಟಿ ನಿರ್ದೇಶಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ : ದಿನಾಂಕ: 01–01–2007 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯವರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಕಾರ್ಖಾನೆಗಳ ಜಂಟಿ ನಿರ್ದೇಶಕರ ವೃಂದಕ್ಕೆ ಸೇರಿದ ದಿನಾಂಕ	ಷರಾ
1	2	3	4	5	6	7
1	ಬಿ.ಎಸ್. ರಾಮಚಂದ್ರ	ಮುಂಬಡ್ತಿ	15–03–1955	24–07–1978	26–04–2002	
2	ಎ.ಆರ್. ವಿಜಯೇಂದ್ರ	ಮುಂಬಡ್ತಿ	26–10–1958	01–04–1982	19–09–2006	ಸರ್ಕಾರಿ ಅಧಿಸೂಚನೆ ಸಂ:ಕಾಇ 45 ಕಾಬಾಸೇ 2006 ದಿನಾಂಕ: 18–9–2006ರ ಮೂಲಕ ಕಾರ್ಖಾನೆಗಳ ಜಂಟಿ ನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡಲಾಗಿದೆ.

ಬಿ. ಶಿವರಾಮ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

ಅನುಬಂಧ –2 ಬಾಯ್ಲರುಗಳ ಜಂಟಿ ನಿರ್ದೇಶಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ : ದಿನಾಂಕ: 01–01–2007 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯವರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಬಾಯ್ಲರುಗಳ ಜಂಟಿ ನಿರ್ದೇಶಕರ ವೃಂದಕ್ಕೆ ಸೇರಿದ ದಿನಾಂಕ	ಷರಾ
1	**2**	**3**	**4**	**5**	**6**	**7**
1	ಟಿ.ಜಿ. ಮಂಜುನಾಥ (ಎಸ್.ಸಿ.)	ಮುಂಬಡ್ತಿ	24–09–1958	18–02–1982	09–07–2004	

ಬಿ. ಶಿವರಾಮ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

ಅನುಬಂಧ –3 ಕಾರ್ಖಾನೆಗಳ ಜಂಟಿ ನಿರ್ದೇಶಕರ (ವೈದ್ಯಕೀಯ) ವೃಂದದ ಅಂತಿಮ ಜೇಷ್ಠತಾ ಪಟ್ಟಿ : ದಿನಾಂಕ: 01–01–2007 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯವರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಕಾರ್ಖಾನೆಗಳ ಜಂಟಿ ನಿರ್ದೇಶಕರ (ವೈದ್ಯಕೀಯ) ವೃಂದಕ್ಕೆ ಸೇರಿದ ದಿನಾಂಕ	ಷರಾ
1	**2**	**3**	**4**	**5**	**6**	**7**
1	ಡಾ:ವಿ.ಎಚ್.ಎಚ್. ಸುರೇಂದ್ರ	ಮುಂಬಡ್ತಿ	09–03–1958	31–04–1984	19–09–2006	ಸರ್ಕಾರಿ ಆದೇಶ ಸಂ: ಕಾಇ 66 ಕಾಬಾಸೇ 2006 ದಿನಾಂಕ: 28–11–2006ರ ಮೂಲಕ ಕಾರ್ಖಾನೆಗಳ ಜಂಟಿ ನಿರ್ದೇಶಕರು (ವೈದ್ಯಕೀಯ) ಹುದ್ದೆಗೆ ಪದೋನ್ನತಿ ನೀಡ ಲಾಗಿದೆ.

ಬಿ. ಶಿವರಾಮ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

ಅನುಬಂಧ – 4

ಕಾರ್ಖಾನೆಗಳ ಉಪ ನಿರ್ದೇಶಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ : ದಿನಾಂಕ: 01–01–2007 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯವರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಕಾರ್ಖಾನೆಗಳ ಉಪ ನಿರ್ದೇಶಕರ ವೃಂದಕ್ಕೆ ಸೇರಿದ ದಿನಾಂಕ	ಷರಾ
	2	**3**	**4**	**5**	**6**	**7**
1	ಎಂ.ಎನ್. ಜಕ್ಕಣ್ಣವರ್	ಮುಂಬಡ್ತಿ	05–08–1956	12–04–1982	14–10–1999	
2	ಎ. ಸೋಮಶೇಖರ	ಮುಂಬಡ್ತಿ	22–05–1955	02–01–1984	20–04–2001	
3	ಜೆ.ಪಿ. ರಾಜಗೋಪಾಲ	ಮುಂಬಡ್ತಿ	31–01–1959	05–01–1984	16–07–2001	
4	ಬಿ.ವಿ. ರವಿಕುಮಾರ್	ಮುಂಬಡ್ತಿ	04–04–1959	20–06–1986	10–10–2002	
5	ಡಿ.ಸಿ. ಜಗದೀಶ್	ಮುಂಬಡ್ತಿ	10–10–1959	25–06–1983	16–10–2002	
6	ಎಸ್.ಆರ್. ಶ್ರೀಧರ್	ಮುಂಬಡ್ತಿ	06–09–1957	17–06–1983	24–02–2005	ಸರ್ಕಾರಿ ಅಧಿಸೂಚನೆ ಸಂ:ಕಾಇ 63 ಕಾಬಾಸೇ 2004 ದಿನಾಂಕ: 17–2–2005ರ ಮೂಲಕ ಕಾರ್ಖಾನೆಗಳ ಉಪ ನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡ ಲಾಗಿದೆ.
7	ಕೆ. ಶ್ರೀನಿವಾಸ್ (ಎಸ್.ಸಿ.)	ಮುಂಬಡ್ತಿ	14–02–1966	28–09–1988	02–03–2005	ಸರ್ಕಾರಿ ಅಧಿಸೂಚನೆ ಸಂ:ಕಾಇ 63 ಕಾಬಾಸೇ 2004 ದಿನಾಂಕ: 17–2–2005ರ ಮೂಲಕ ಕಾರ್ಖಾನೆಗಳ ಉಪ ನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡ ಲಾಗಿದೆ.

ಬಿ. ಶಿವರಾಮ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

ಅನುಬಂಧ – 5

ಬಾಯ್ಲರುಗಳ ಉಪ ನಿರ್ದೇಶಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ : ದಿನಾಂಕ: 01–01–2007 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯವರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಬಾಯ್ಲರುಗಳ ಉಪ ನಿರ್ದೇಶಕರ ವೃಂದಕ್ಕೆ ಸೇರಿದ ದಿನಾಂಕ	ಷರಾ
1	2	3	4	5	6	7
1	ಎಸ್.ಬಿ. ಬಿರಾದಾರ	ಮುಂಬಡ್ತಿ	08–11–1954	08–03–1984	04–02–2003	
2	ಎಸ್.ಎಂ. ವಾಸಣ್ಣ	ಮುಂಬಡ್ತಿ	05–03–1958	08–03–1984	10–11–2004	

ಬಿ. ಶಿವರಾಮ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

ಅನುಬಂಧ – 6

ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ : ದಿನಾಂಕ: 01–01–2007 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯವರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರ ವೃಂದಕ್ಕೆ ಸೇರಿದ ದಿನಾಂಕ	ಷರಾ
1	2	3	4	5	6	7
1	ಟಿ.ಆರ್. ರಮೇಶ (ಎಸ್.ಟಿ)	ಮುಂಬಡ್ತಿ	30–07–1960	26–09–1988	10–05–2000	
2	ಕೆ.ಜಿ. ನಂಜಪ್ಪ	ಮುಂಬಡ್ತಿ	25–04–1972	03–08–1995	19–10–2002	
3	ಟಿ.ವಿ. ನಾರಾಯಣಪ್ಪ (ಎಸ್.ಸಿ)	ಮುಂಬಡ್ತಿ	10–03–1967	09–08–1995	19–10–2002	
4	ಎ.ಜೆ. ಸತೀಶಬಾಬು	ಮುಂಬಡ್ತಿ	12–01–1963	03–08–1995	19–10–2002	
5	ರವೀಂದ್ರನಾಥ ಎನ್ ರಾಠೋಡ್ (ಎಸ್.ಸಿ.)	ಮುಂಬಡ್ತಿ	22–05–1969	29–12–1995	19–10–2002	
6	ಎಚ್.ಎಸ್. ನರೇಂದ್ರಬಾಬು	ಮುಂಬಡ್ತಿ	23–08–1966	01–04–1991	08–11–2002	
7	ಆರ್.ಕೆ. ಪಾರ್ಥಸಾರಥಿ	ಮುಂಬಡ್ತಿ	23–12–1967	29–10–1997	24–02–2005	ಸರ್ಕಾರಿ ಅಧಿಸೂಚನೆ ಸಂ: ಕಾಇ 67 ಕಾಬಾಸೇ 2004 ದಿನಾಂಕ : 17–2–2005ರ ಮೂಲಕ ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡಲಾಗಿದೆ.

1	2	3	4	5	6	7
8	ಎನ್. ನವನೀತಮೋಹನ್	ಮುಂಬಡ್ತಿ	11–03–1971	12–11–1997	26–02–2005	ಸರ್ಕಾರಿ ಅಧಿಸೂಚನೆ ಸಂ: ಕಾಇ 67 ಕಾಬಾಸೇ 2004 ದಿನಾಂಕ : 17–2–2005ರ ಮೂಲಕ ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡಲಾಗಿದೆ.
9	ಎಂ.ಎಸ್. ಮಹದೇವ್	ಮುಂಬಡ್ತಿ	20–07–1967	12–11–1997	08–06–2005	ಸರ್ಕಾರಿ ಅಧಿಸೂಚನೆ ಸಂ: ಕಾಇ 21 ಕಾಬಾಸೇ 2005 ದಿನಾಂಕ : 28–5–2005ರ ಮೂಲಕ ಕಾರ್ಖಾನೆಗಳ ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡಲಾಗಿದೆ.

ಮೇಲ್ಕಂಡ ವೃಂದದ ಜೇಷ್ಠತೆಯು ಮಾನ್ಯ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:18191/2009ರ ಅಂತಿಮ ತೀರ್ಪಿಗೆ ಒಳಪಡುತ್ತದೆ.

ಬಿ. ಶಿವರಾಮ ಗೌಡ,

ಸರ್ಕಾರದ ಅಧೀನ ಕಾರ್ಯದರ್ಶಿ

ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

ಅನುಬಂಧ – 7

ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ : ದಿನಾಂಕ: 01–01–2007 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯವರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ/ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಬಾಯ್ಲರುಗಳ ಹಿರಿಯ ಸಹಾಯಕ ನಿರ್ದೇಶಕರ ವೃಂದಕ್ಕೆ ಸೇರಿದ ದಿನಾಂಕ	ಷರಾ
1	2	3	4	5	6	7
1	ಕೆ.ವಿ.ಚಂದ್ರಮೌಳಿ	ಮುಂಬಡ್ತಿ	20–05–1956	07–03–1984	02–05–1996	
2	ಅಶೋಕ. ಆರ್.ಗಾಂವ್‌ಕರ	ಮುಂಬಡ್ತಿ	14–02–1956	10–08–1989	26–08–1999	
3	ಕೆ.ವಿ.ಪಾಲಯ್ಯ (ಎಸ್.ಟಿ)	ಮುಂಬಡ್ತಿ	19–09–1962	21–04–1995	04–02–2003	
4	ಕೆ.ಎಂ.ಪ್ರಥಮ್	ಮುಂಬಡ್ತಿ	20–05–1969	19–12–1991	23–12–2004	

ಬಿ. ಶಿವರಾಮ ಗೌಡ,

ಸರ್ಕಾರದ ಅಧೀನ ಕಾರ್ಯದರ್ಶಿ

ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

ಅನುಬಂಧ – 8 ಕಾರ್ಖಾನೆಗಳ ಸಹಾಯಕ ನಿರ್ದೇಶಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ : ದಿನಾಂಕ: 01–01–2007 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯವರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಕಾರ್ಖಾನೆಗಳ ಸಹಾಯಕ ನಿರ್ದೇಶಕರ ವೃಂದಕ್ಕೆ ಸೇರಿದ ದಿನಾಂಕ	ಷರಾ
1	2	3	4	5	6	7
1	ವಿ. ತಿಮ್ಮರಾಜು	ನೇರ ನೇಮಕಾತಿ	18–05–1970	20–10–1997	20–10–1997	
2	ಎಸ್.ಎ. ನರಸಿಂಹಮೂರ್ತಿ	ನೇರ ನೇಮಕಾತಿ	20–07–1967	13–11–1997	13–11–1997	

1	2	3	4	5	6	7
3	ರಾಜೇಶ ಸಿ ಮಿಶ್ರಿಕೋಟಿ (ಎಸ್.ಸಿ)	ನೇರ ನೇಮಕಾತಿ	17–11–1969	20–10–1997	20–10–1997	
4	ಕೆ.ಎಸ್. ಕೃಷ್ಣಪ್ಪ (ಎಸ್.ಟಿ)	ನೇರ ನೇಮಕಾತಿ	01–06–1971	12–11–1997	12–11–1997	
5	ಎಂ.ಎ. ಸೋಮಶೇಖರ	ನೇರ ನೇಮಕಾತಿ	15–07–1973	11–03–1998	11–03–1998	
6	ವೆಂಕಟೇಶ ರಾಠೋಡ್ (ಎಸ್.ಸಿ)	ನೇರ ನೇಮಕಾತಿ	24–03–1974	16–03–1998	16–03–1998	
7	ಭಾರತಿ ಮಗದುಮ ಅಣ್ಣಪ್ಪ	ನೇರ ನೇಮಕಾತಿ	27–08–1966	23–03–1998	23–03–1998	
8	ಕೆ.ಎನ್. ಸಫೀರ್ ಅಹ್ಮದ್	ನೇರ ನೇಮಕಾತಿ	09–08–1963	05–03–1998	05–03–1998	
9	ಎಚ್. ಸುರೇಶ	ನೇರ ನೇಮಕಾತಿ	20–06–1970	29–04–1999	29–04–1999	

ಬಿ. ಶಿವರಾಮ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

ಅನುಬಂಧ – 9 ಬಾಯ್ಲರುಗಳ ಸಹಾಯಕ ನಿರ್ದೇಶಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ : ದಿನಾಂಕ: 01–01–2007 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯವರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಬಾಯ್ಲರುಗಳ ಸಹಾಯಕ ನಿರ್ದೇಶಕರ ವೃಂದಕ್ಕೆ ಸೇರಿದ ದಿನಾಂಕ	ಷರಾ
1	2	3	4	5	6	7
1	ಎಂ.ಎಚ್. ಚಿಕ್ಕಮುನಿಯಪ್ಪ (ಎಸ್.ಸಿ)	ನೇರ ನೇಮಕಾತಿ	18–04–1964	16–10–2003	16–10–2003	

ಬಿ. ಶಿವರಾಮ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

ಅನುಬಂಧ – 10

ಆಡಳಿತಾಧಿಕಾರಿ ವೃಂದದ ಅಂತಿಮ ಜೇಷ್ಠತಾ ಪಟ್ಟಿ : ದಿನಾಂಕ: 01–01–2007 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯವರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ/ ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಆಡಳಿತಾಧಿಕಾರಿ ವೃಂದಕ್ಕೆ ಸೇರಿದ ದಿನಾಂಕ	ಷರಾ
1	2	3	4	5	6	7
1	ವೀರಪ್ಪ	ಮುಂಬಡ್ತಿ	28–03–1955	22–09–1977	23–08–2004	

ಬಿ. ಶಿವರಾಮ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

ಅನುಬಂಧ – 11

ಪತ್ರಾಂಕಿತ ವ್ಯವಸ್ಥಾಪಕರ ವೃಂದದ ಅಂತಿಮ ಜೇಷ್ಠತಾ ಪಟ್ಟಿ : ದಿನಾಂಕ: 01–01–2007 ರಲ್ಲಿದ್ದಂತೆ

ಕ್ರ. ಸಂ.	ಅಧಿಕಾರಿಯವರ ಹೆಸರು ಶ್ರೀಯುತರಾದ	ನೇರ ನೇಮಕಾತಿ/ ಮುಂಬಡ್ತಿ/ಇತರೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ಪತ್ರಾಂಕಿತ ವ್ಯವಸ್ಥಾಪಕರ ವೃಂದಕ್ಕೆ ಸೇರಿದ ದಿನಾಂಕ	ಷರಾ
1	2	3	4	5	6	7
1	ಕೃಷ್ಣ (ಎಸ್.ಸಿ.)	ಮುಂಬಡ್ತಿ	17–08–1950	27–12–1972	29–11–2004	

ಬಿ. ಶಿವರಾಮ ಗೌಡ,
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ (ಕಾರ್ಖಾನೆ ಮತ್ತು ಬಾಯ್ಲರುಗಳು).

ಪಿ.ಆರ್. 865

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ: ಎಸ್‌ಡಿಕೆ/61/ಡಿಟಿಸಿಆರ್/2009–10, ದಿನಾಂಕ: 11–08–2011

ಉಪಸ್ಥಿತರು: ಬಿ.ವಿ ಹೂವಪ್ಪ ಗೌಡ, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ, ಮಂಗಳೂರು

ಫಿರ್ಯಾದುದಾರರು:–
ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–2
ಮಂಗಳೂರು

ಆರೋಪಿ
ಬೈತ್ತಾರ್ ಮೊಹಿಯುದ್ದೀನ್, ಬಿನ್:ಬೈತ್ತಾರ್ ಉಸ್ತಾದ್,
ಕುತ್ತಾರ್ ಲೋಕಾಲಿಟಿ, ಮದನಿನಗರ, ಮುನ್ನೂರು ಗ್ರಾಮ,
ಮಂಗಳೂರು

ವಾಹನದ ಮಾಲೀಕರು
ಶ್ರೀ ಅಬ್ದುಲ್ ಮಜೀದ್, ಬಿನ್: ಎನ್.ಶಂಶುದ್ದೀನ್,
ವಾಸ: ಹಸೀನಾ ಮಂಜಿಲ್, ದರ್ಗಾದ ಹತ್ತಿರ ನ್ಯೂ ಕಾಲೋನಿ
ಕೊಡಂಕೂರ್, ಅಂಬಲಪಾಡಿ ಅಂಚೆ, ಉಡುಪಿ ಜಿಲ್ಲೆ.

ಪ್ರಕರಣದ ಮುಖ್ಯಾಂಶಗಳು:–

ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–2 ಮಂಗಳೂರುರವರು ದಿ:10–9–2009 ರಂದು ರಾತ್ರಿ 8–40 ಗಂಟೆ ಸಮಯಕ್ಕೆ ಮಂಗಳೂರು ತಾಲೂಕಿನ ಕೋಣಾಜೆ ಗ್ರಾಮದ ಅಸೈಗೋಳಿ ಲೊಕಾಲಿಟಿ ರಸ್ತೆಯಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದಾಗ ಕಪ್ಪು ಬಣ್ಣದ ಕಾರೊಂದು ಬರುತ್ತಿರುವುದನ್ನು ಕಂಡು ಅನುಮಾನಗೊಂಡು ಅದನ್ನು ನಿಲ್ಲಿಸಲು ಸನ್ನೆಮಾಡಿದಾಗ ಚಾಲಕನು ಕಾರನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ಕಾರಿನಲ್ಲಿದ್ದ ವ್ಯಕ್ತಿಗಳು ಕತ್ತಲಿನಲ್ಲಿ ಓಡಿ ತಲೆಮರೆಸಿಕೊಂಡಿದ್ದು ಅವರಲ್ಲಿ ಓರ್ವನ ಮುಖ ಪರಿಚಯವಾಗಿ ಆತನು ಬೈತ್ತಾರ್ ಮೊಹಿಯುದ್ದೀನ್ ಎಂದು ತಿಳಿದುಬಂದಿರುತ್ತದೆ. ವ್ಯಕ್ತಿಗಳು ತಲೆತಪ್ಪಿಸಿ ಕೊಂಡಿರುವುದನ್ನು ಗಮನಿಸಿ, ಕಾರಿನಲ್ಲಿ ಅಕ್ರಮ ಸೊತ್ತುಗಳು ಇರಬಹುದೆಂದು ಸಂಶಯಗೊಂಡು ಕೂಲಂಕುಷವಾಗಿ ಪರಿಶೀಲಿನೆ ನಡೆಸಲಾಗಿ, 35 ಲೀಟರು ಸಾಮರ್ಥ್ಯದ 4 ಪ್ಲಾಸ್ಟಿಕ್ ಕ್ಯಾನುಗಳಲ್ಲಿ 140 ಲೀಟರು ಮದ್ಯಸಾರ ಇರುವುದು ಪತ್ತೆಯಾಗಿ ಈ ಬಗ್ಗೆ ವಾಹನದಲ್ಲಿ ಯಾವುದೇ ಪರವಾನಿಗೆ ಇಲ್ಲದೇ ಇರುವುದರಿಂದ ಇದು ಒಂದು ಅಕ್ರಮ ಮದ್ಯಸಾರ ಸಾಗಾಟದ ಪ್ರಕರಣವೆಂದು ಖಚಿತಪಡಿಸಿಕೊಂಡು, ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 13, 14ರ ಪ್ರಕಾರ ಅಪರಾಧ ಹಾಗೂ 32,38ಎ ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ ಸ್ಥಳದಲ್ಲಿಯೇ ಮಹಜರು ಕ್ರಮ ಜರುಗಿಸಿ ಪತ್ತೆಯಾದ ವಾಹನ ಮತ್ತು ಮದ್ಯಸಾರ ವನ್ನು ಜಪ್ತುಪಡಿಸಿಕೊಂಡು ಮಾದರಿಗಳನ್ನು ಪ್ರತ್ಯೇಕಿಸಿ ತಲೆಮರೆಸಿಕೊಂಡ ಆರೋಪಿತ ನಾದ ಬೈತ್ತಾರ್ ಮೊಹಿಯುದ್ದೀನ್, ಬಿನ್: ಬೈತ್ತಾರ್ ಉಸ್ತಾದ್, ಕುತ್ತಾರು ಲೋಕಾಲಿಟಿ, ಮದನಿನಗರ, ಮುನ್ನೂರು ಗ್ರಾಮ, ಮಂಗಳೂರು ತಾಲೂಕು ಇವರ ವಿರುದ್ದ ತಕ್ಷೀರು ಸಂ:15/2009–10ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು, ಪ್ರಕರಣದ ವಿಲೇವಾರಿ ತನಕ ಜಪ್ತುಪಡಿಸಿಕೊಳ್ಳಲಾದ ಸೊತ್ತುಗಳನ್ನು ಸ್ವಾಧೀನದಲ್ಲಿಟ್ಟು ಕೊಳ್ಳಲು ಅಧಿಕೃತ ಅಧಿಕಾರಿಗಳ ಪ್ರಾಧಿಕಾರದಿಂದ ದಿ:17–9–2009 ರಂದು ಅನುಮತಿಯನ್ನು ಪಡೆದು ಕೊಂಡಿರುತ್ತಾರೆ.

ಜಪ್ತುಪಡಿಸಿಕೊಳ್ಳಲಾದ ಸೊತ್ತುಗಳು:–

1) ಕಪ್ಪು ಬಣ್ಣದ ಸ್ಯಾಂಟ್ರೋ ಹುಂಡೈ ಕಾರು ಸಂ : KA-03-MC-1828

2) 35 ಲೀಟರು ಸಾಮರ್ಥ್ಯದ 4 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ತಲಾ 35 ಲೀಟರಿನಂತೆ ಒಟ್ಟು 140 ಲೀ ಮದ್ಯಸಾರ.

(750 ಎಂಎಲ್‌ನ 4 ಬಾಟಲಿಗಳಲ್ಲಿ ಮದ್ಯಸಾರವನ್ನು ಮಾದರಿ ತೆಗೆಯಲಾಗಿದೆ)

ಜಪ್ತಾದ ವಾಹನ ಸ್ಯಾಂಟ್ರೋ ಹುಂಡೈ ಕಾರು ಸಂ: KA-03-MC-1828 ಇದರ ಮಾಲಕರೆಂದು ಹೇಳಿಕೊಂಡ ಶ್ರೀ ಅಬ್ದುಲ್ ಮಜೀಜ್, ಅಸೀನಾ ಮಂಜಿಲ್, ನಿಯರ್ ದರ್ಗ ರಸ್ತೆ ನ್ಯೂ ಕಾಲೊನಿ ,ಕೊಡಂಕೂರು,ಅಂಬಲಪಾಡಿ ಅಂಚೆ ,ಉಡುಪಿ ಜಿಲ್ಲೆ ಇವರು ತಮ್ಮ ವಕೀಲರ ಮೂಲಕ ದಿ:10–11–2009ರಂದು ಅರ್ಜಿ ಸಲ್ಲಿಸಿ, ವಾಹನದ ಮದ್ಯಂತರ ಬಿಡುಗಡೆಗಾಗಿ ಕೋರಿರುತ್ತಾರೆ. ಸದ್ರಿಯವರ ಅರ್ಜಿಯ ವಿಚಾರಣೆ ಕೈಗೊಂಡು ಈ ಪ್ರಾಧಿಕಾರದಿಂದ ದಿ: 23–4–2010 ರಂದು ಹೊರಡಿಸಿದ ಮದ್ಯಂತರ ಆದೇಶದಲ್ಲಿ ಅರ್ಜಿದಾರರ ಮನವಿಯನ್ನು ಪುರಸ್ಕರಿಸಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಾಹನಕ್ಕೆ ನಿಗಧಿಪಡಿಸಿರುವ ಮೊತ್ತಕ್ಕೆ ಸಮಾನವಾದ ರೂ.57,000/–ರ ಮೌಲ್ಯದ ಬ್ಯಾಂಕ್ ಗ್ಯಾರೆಂಟಿಯನ್ನು ಭದ್ರತೆಯಾಗಿ ಒದಗಿಸುವ ಹಾಗೂ ಇತರೆ ಷರತ್ತುಗಳ ಮೇಲೆ ವಾಹನವನ್ನು ಮಾಲೀಕರ ಸುಪರ್ಧಿಗೆ ಬಿಡುಗಡೆಗೊಳಿಸಲು ಆದೇಶಿಸಲಾಗಿರುತ್ತದೆ. ಸದ್ರಿ ಆದೇಶದಂತೆ ವಾಹನದ ಮಾಲೀಕರು ರೂ.57,000/– ಮೊತ್ತದ ಬ್ಯಾಂಕ್ ಗ್ಯಾರೆಂಟಿಯನ್ನು ಕಾರ್ಪೋರೇಶನ್ ಬ್ಯಾಂಕ್, ಉಡುಪಿ ಶಾಖೆ ಇಲ್ಲಿಂದ ಪಡೆದು ಪ್ರಾಧಿಕಾರಕ್ಕೆ ಸಲ್ಲಿಸಿರುವ ಮೇರೆಗೆ ವಾಹನವನ್ನು ವಾಹನದ ಮಾಲೀಕರಿಗೆ ಮದ್ಯಂತರ ಬಿಡುಗಡೆಗೊಳಿಸಲಾಗಿರುತ್ತದೆ. ಸದ್ರಿ ಬ್ಯಾಂಕ್ ಗ್ಯಾರೆಂಟಿಯ ಮಾನ್ಯತೆ ಅವಧಿಯು ದಿ:15–4–2012ರವರೆಗೆ ಊರ್ಜಿತ ದಲ್ಲಿರುತ್ತದೆ.

ತನಿಖಾದಿಕಾರಿಗಳು ಪ್ರಕರಣದಲ್ಲಿ ತನಿಖೆ ಕೈಗೊಂಡು ಜಪ್ತಾದ ವಾಹನ ಸ್ಯಾಂಟ್ರೋ ಹುಂಡೈ ಕಾರು ಸಂ:KA–03–MC–1828 ಇದರ ಬಿ ರಿಜಿಸ್ಟಾರ್ ಎಕ್ಸ್‌ಟ್ರಾಕ್ಸ್ ವರದಿಯನ್ನು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಉಡುಪಿ ಜಿಲ್ಲೆ,ಉಡುಪಿ ಇಲ್ಲಿಂದ ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಸದ್ರಿ ವರದಿಯ ಪ್ರಕಾರ ಶ್ರೀ. ಅಬ್ದುಲ್ ಮಜೀಜ್, ಅಸೀನಾ ಮಂಜಿಲ್, ಬಾಳಿಗ ನ್ಯೂ ಕಾಲೊನಿ ,ಕೊಡಂಕೂರು ,ಅಂಬಲಪಾಡಿ, ಉಡುಪಿ ತಾಲೂಕು

ಇವರು ದಿ:18–10–2008ರಿಂದ ಅನ್ವಯವಾಗುವಂತೆ ವಾಹನದ ನೊಂದಾಯಿತ ಮಾಲೀಕರಾಗಿರುವುದಾಗಿ ಹಾಗೂ ಮೆ:ಶ್ರೀಲಕ್ಷ್ಮಿ ಮಲ್ಟಿ ಪಬ್ಲಿಕ್ ಕೋ–ಅಪರೇಟಿಂವ್ ಸೊಸೈಟಿ ಲಿಮಿಟೆಡ್, ಉಡುಪಿ, ಉಡುಪಿ ಜಿಲ್ಲೆ ಇವರು ವಾಹನದ ಹೆಚ್.ಪಿ.ಎ ದಾರರಾಗಿರುವುದಾಗಿ ತಿಳಿದುಬಂದಿರುವ ಮೇರೆಗೆ ವಾಹನದ ಮಾಲೀಕರಿಗೆ ಹಾಗೂ ಅರೋಪಿತ ವ್ಯಕ್ತಿಗೆ ಈ ಪ್ರಾಧಿಕಾರದಿಂದ ದಿ:01–03–2010 ರಂದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರ ಪ್ರಕಾರ ಕಾರಣ ಕೇಳಿ ನೋಟಿಸು ನೀಡಲಾಗಿದ್ದು,ಸದ್ರಿ ಕಾರಣ ಕೇಳಿ ನೋಟಿಸು ವಾಹನದ ಮಾಲೀಕರಿಗೆ ಜ್ಯಾರಿಯಾಗದೇ ಅಂಚೆ ಷರಾದೊಂದಿಗೆ ಪ್ರಾದಿಕಾರಕ್ಕೆ ವಾಪಸ್ಸು ಬಂದಿರುತ್ತದೆ.

ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮದ್ಯಸಾರದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ಕರ್ನಾಟಕ ಸರ್ಕಾರದ ರಾಸಾಯನಿಕ ವಿಶ್ಲೇಷಕರು,ಮಂಗಳೂರು ಇವರಿಂದ ಪಡೆದ ರಾ.ವಿ ಸಂ: ಇಎಕ್ಸ್‌ಇ–372–4 ದಿ: 30–12–2009ರ ಪ್ರತಿಯನ್ನು ಪ್ರಕರಣದ ತನಿಖಾದಿಕಾರಿಗಳ ತನಿಖಾ ವರದಿ ಸಂ:ಎಂಎಸ್ಆರ್–II/ಅಸಇ(1): ಸಿಆರ್ಎಂ/ 15/09–10, ದಿ:2–5–2010ರ ಜೊತೆಯಲ್ಲಿ ಪ್ರಾದಿಕಾರಕ್ಕೆ ಒಪ್ಪಿಸಿ ಜಪ್ತುಪಡಿಸಿಕೊಂಡ ಮದ್ಯಸಾರವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಶಿಫಾರಸ್ಸು ಮಾಡಿರುವುದರಿಂದ ಹಾಗೂ ಮಾದರಿ ವಿಶ್ಲೇಷಣಾ ವರದಿಯಲ್ಲಿ ಮಾದರಿಗಳಲ್ಲಿ ಮದ್ಯಸಾರದ ಅಂಶವು ಅನುಕ್ರಮವಾಗಿ 93%, 94%, 95% ಮತ್ತು 95% ಇರುವುದಾಗಿ ಹಾಗೂ ಮದ್ಯಸಾರವನ್ನು ಭಟ್ಟಿ ಇಳಿಸಿದ ನಂತರ ಮದ್ಯ ಪೇಯಗಳ ತಯಾರಿಕೆ ಹಾಗೂ ಕೈಗಾರಿಕಾ ಉದ್ದಿಮೆಗಳ ಬಳಕೆಯಲ್ಲಿ ಉಪಯೋಗಿಸಬಹುದೆಂದು ದೃಡೀಕರಿಸಿರುತ್ತಾರೆ. ಸದ್ರಿ ಮದ್ಯಸಾರ (ಮಾದರಿಗಳನ್ನು ಹೊರತು ಪಡಿಸಿ) ವನ್ನು ದಿ: 11–6–2010ರಂದು ಹೊರಡಿಸಿದ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಪ್ರಸ್ತುತ ಚಾಲ್ತಿ ಯಲ್ಲಿರುವ ಸರ್ಕಾರದ ಅದೇಶದಂತೆ ಮುಟ್ಟುಗೋಲು ಹಾಕಿಕೊಂಡ ಮದ್ಯಸಾರವನ್ನು ನಾಶ ಪಡಿಸಲು ಆದೇಶಿಸಲಾಗಿರುತ್ತದೆ.ಅದರಂತೆ ಮದ್ಯಸಾರವನ್ನು ಅಬಕಾರಿ ಉಪ ಅಧೀಕ್ಷಕರು, ಮಂಗಳೂರು ಉಪ ವಿಭಾಗ–1 ಇವರ ಸಮಕ್ಷಮದಲ್ಲಿ ನಾಶಪಡಿಸಲಾಗಿರುತ್ತದೆ

ನಂತರ ಪ್ರಕರಣದಲ್ಲಿ ವಿಚಾರಣೆಯನ್ನು ಪ್ರಾರಂಬಿಸಿ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಅಭಿಯೋಗದ ಪರ ಸಾಕ್ಷಿಗಳು ಹಾಗೂ ಪ್ರತಿರಕ್ಷಾ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಗದ ಪರ ಸಲ್ಲಿಸಿರುವ ಸಾಕ್ಷಾಧ್ಯಾರಗಳಿಂದ ಈ ಕೆಳಗಿನ ವಿವಾಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

ವಿವಾದಾಂಶಗಳು

1) ದಿನಾಂಕ: 10–9–2009ರಂದು ಸ್ಯಾಂಟ್ರೋ ಹುಂಡೈ ಕಾರು ನೊಂದಣಿ ಸಂ: KA-03-MC-1828ರಲ್ಲಿ ಸಾಗಾಣಿಕೆಯಾದ ಸೊತ್ತು ಮದ್ಯಸಾರ ಎಂಬ ಬಗ್ಗೆ ರಾಸಾಯನಿಕ ವಿಶ್ಲೇಷಣಾ ವರದಿಯಿಂದ ದೃಡೀಕೃತವಾಗಿದೆಯೇ?

2) ದಿನಾಂಕ: 10–9–2009ರಂದು ಸ್ಯಾಂಟ್ರೋ ಹುಂಡೈ ಕಾರು ನೊಂದಣಿ ಸಂ: KA-03-MC-1828 ಇದರಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?

3) ವಶಪಡಿಸಿಕೊಂಡಿರುವ ವಾಹನದ ಮಾಲೀಕರು ತನ್ನ ತಿಳುವಳಿಕೆಗೆ ಬಾರದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಮದ್ಯ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?

4) ಜಪ್ತು ಪಡಿಸಲಾಗಿರುವ ವಾಹನ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದು ಮತ್ತು ಎರಡನೇ ಅಂಶಗಳನ್ನು ಗುಣಾತ್ಮಕವಾಗಿ, ಮೂರನೇ ಅಂಶವನ್ನು ನಕರಾತ್ಮಕವಾಗಿ ಹಾಗೂ ನಾಲ್ಕನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ–1:–

ಪ್ರಕರಣದ ಫಿರ್ಯಾದುದಾರ ಹಾಗೂ ತನಿಖಾಧಿಕಾರಿಯವರಾದ ಶ್ರೀ. ಹೆಚ್.ವಿ ಸುರೇಶ್, ಅ.ಉ.ನಿ ಮಂಗಳೂರು ದಕ್ಷಿಣ ವಲಯ–2 ಇವರು ದಿ:3–2–2011ರಂದು ಈ ಪ್ರಾದಿಕಾರದ ಮುಂದೆ ಹಾಜರಾಗಿ ಸಾಕ್ಷ್ಯ ನೀಡುತ್ತಾ, ದಿನಾಂಕ:10–3–2009ರಂದು ರಾತ್ರಿ 8–40 ಗಂಟೆಗೆ ಮಂಗಳೂರು ಕೋಣಾಜೆ ಅಸೈಗೋಳಿ ಲೊಕಾಲಿಟಿ ಎಂಬಲ್ಲಿ ಸಿಬ್ಬಂಧಿಗಳ ಜೊತೆಗೆ ಅಬಕಾರಿ ಗಸ್ತು ನಡೆಸುವಾಗ ಬಂದ ಮಾಹಿತಿಯಂತೆ ವಾಹನ ನೊಂದಣಿ ಸಂ: KA-03-MC-1828 ಸ್ಯಾಂಟ್ರೋ ಹುಂಡೈ ಕಾರು ಇದರಲ್ಲಿ ಇಬ್ಬರು ವ್ಯಕ್ತಿಗಳು ಇದ್ದು ಕಾರನ್ನು ನಿಲ್ಲಿಸಿದ ಸಂದರ್ಭದಲ್ಲಿ ಆ ವ್ಯಕ್ತಿಗಳು ಓಡಿ ಪರಾರಿಯಾದ ಮೇರೆಗೆ ಅನುಮಾನ ಗೊಂಡು ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆಯಲು ಕಾಲಾವಕಾಶವಿಲ್ಲದ ಕಾರಣ ಅಬಕಾರಿ ಕಾಯಿದೆ ಕಲಂ 54ರಂತೆ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಕಾರನ್ನು ಪರಿಶೀಲನೆ ಮಾಡಿದಾಗ ಕಾರಿನ ಹಿಂಬದಿ ಸೀಟಿನಲ್ಲಿ ತಲಾ 35 ಲೀಟರು ಸಾಮರ್ಥ್ಯದ 4 ಕ್ಯಾನುಗಳಲ್ಲಿ ಒಟ್ಟು 140 ಲೀಟರು ಮದ್ಯಸಾರ ಇರುವುದು ಪತ್ತೆಹಚ್ಚಿ ಈ ಬಗ್ಗೆ ಯಾವುದೇ ದಾಖಲಾತಿಗಳು ಕಾರಿನಲ್ಲಿ ಲಭ್ಯವಿಲ್ಲದ ಕಾರಣ ಇದು ಅಕ್ರಮ ಮದ್ಯಸಾರವೆಂಬುದು ಖಚಿತಪಡಿಸಿಕೊಂಡು ಸದ್ರಿ ಮದ್ಯಸಾರದಿಂದ ರಾಸಾಯನಿಕ ಪರೀಕ್ಷೆಗಾಗಿ ಪ್ರತಿ ಕ್ಯಾನಿನಿಂದ ತಲಾ 750 ಎಂಎಲ್‌ನಂತೆ 4

ಬಾಟಲಿಗಳಲ್ಲಿ ಮಾದರಿ ತೆಗೆದು ಗುರುತು ಚೀಟಿ ಅಂಟಿಸಿ ಸ್ಥಳದಲ್ಲಿಯೇ ಮಹಜರು ನಡೆಸಿ ಸದ್ರಿ ಮಹಜರಿಗೆ ಸಿಬ್ಬಂಧಿಯವರ ಸಹಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನಿಶಾನೆ ಪಿ–1 ಎಂದೂ, ಶೋಧನಾ ಸಮುಚಿತ ಆಧಾರವನ್ನು ನಿಶಾನೆ ಪಿ–2 ಎಂದು ಗುರುತಿಸಲಾಗಿರುತ್ತದೆ. ಜಪ್ತುಪಡಿಸಿಕೊಂಡ ಸೊತ್ತು ಮತ್ತು ವಾಹನ ಸಮೇತ ಕಛೇರಿಗೆ ಬಂದು ಪ್ರಕರಣ ದಾಖಲಿಸಿಕೊಂಡು ತಯಾರಿಸಲಾದ ಪ್ರ.ವ.ವರದಿಯನ್ನು ನಿಶಾನೆ ಪಿ–3 ಎಂದು ,ಅದರ ಮೇಲಿನ ಸಹಿಯನ್ನು ನಿ.ಪಿ–3ಎ ಎಂದು ಪ್ರಕರಣದ ಅರೋಪಿತ ವ್ಯಕ್ತಿಯ ಶೋಧನೆಗೆ ಪ್ರಯತ್ನಿಸಲಾಗಿ ಸದ್ರಿ ವ್ಯಕ್ತಿಯು ಮಾನ್ಯ ಸತ್ರ ನ್ಯಾಯಾಲಯದಲ್ಲಿ ನಿರೀಕ್ಷಣಾ ಜಾಮೀನು ಪಡೆದು ದಿ:24–3–2010ರಂದು ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆಗೊಂಡಿರುತ್ತಾರೆ. ಜಪ್ತಾದ ವಾಹನದ ಮಾಲೀಕತ್ವದ ಬಗ್ಗೆ ಸಂಬಂಧಿಸಿದ ಪ್ರಾ.ಸಾ ಅಧಿಕಾರಿಗಳಿಗೆ ಪತ್ರ ವ್ಯವಹಾರ ನಡೆಸಿ ದಿ:6–1–2010ರಂದು ವಾಹನದ ಬಿ ರಿಜಿಸ್ಟಾರ್ ಎಕ್ಸ್‌ಟ್ರಾಕ್ಟ್ ವರದಿಯನ್ನು ಪಡೆದಿರುತ್ತೇನೆ. ಸದ್ರಿ ವರದಿಯ ಪ್ರಕಾರ ವಾಹನದ ಮಾಲೀಕರು ಶ್ರೀ.ಅಬ್ದುಲ್ ಮಜೀದ್ ಅಗಿರುತ್ತಾರೆ.ಮಾದರಿ ಸೀಸೆಗಳನ್ನು ದಿ:2–11–2009ರಂದು ಶ್ರೀ.ರಾಜೇಶ್ ಗೃಹರಕ್ಷಕ ಇವರ ಮೂಲಕ ವಿಶ್ಲೇಷಣೆಗೆ ಒಳಪಡಿಸಿ ದಿ:12–1–2010ರಂದು ವಿಶ್ಲೇಷಣಾ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಅದನ್ನು ನಿಶಾನೆ ಪಿ–4 ಎಂದು, ಅದರ ಮೇಲಿನ ಸಹಿಯನ್ನು ನಿ.ಪಿ–4 ಎ ಎಂದು ಗುರುತಿಸಿ ಉಳಿದಂತೆ ದಾಖಲೆಗಳಾದ ಮಾದರಿ ಸೀಲನ್ನು ನಿ.ಪಿ–5, ಅದರ ಮೇಲಿನ ಸಹಿಯನ್ನು ನಿ.ಪಿ–5ಎ, ವಿಶ್ಲೇಷಣಾ ವರದಿಗೆ ನೀಡಲಾದ ಕೋರಿಕೆ ಪತ್ರದ ಪ್ರತಿಯನ್ನು ನಿ.ಪಿ–6 ,ಅದರ ಮೇಲಿನ ಸಹಿಯನ್ನು ನಿ.ಪಿ–6 ಎ ಎಂದು ಗುರುತಿಸಿರುತ್ತೇನೆ. ಮಾನ್ಯ ಅಧಿಕೃತ ಅಧಿಕಾರಿಗಳ ಮಧ್ಯಂತರ ಅದೇಶದಂತೆ ವಾಹನವನ್ನು ಬಿಡುಗಡೆಗೊಳಿಸಿರುತ್ತೇನೆ. ದಿ:2–5–2010ರಂದು ಅಧಿಕೃತ ಅದಿಕಾರಿಗಳಿಗೆ ಮುಟ್ಟುಗೋಲು ವ್ಯವಹರಣೆಯ ಬಗ್ಗೆ ವರದಿ ನೀಡಿದ್ದು ಅದನ್ನು ನಿ.ಪಿ–7 ಎಂದು, ಅದರ ಮೇಲಿನ ತನ್ನ ಸಹಿಯನ್ನು ನಿಶಾನೆ ಪಿ–7 ಎ ಎಂದು ಗುರುತಿಸಲಾಗಿರುತ್ತದೆ. ತಕ್ಷೀರಿಗೆ ಸಂಬಂಧಿಸಿ ಮಾನ್ಯ 3ನೇ ಪ್ರಥಮ ದರ್ಜೆ ನ್ಯಾಯಾಲಯದಲ್ಲಿ ಅಬಕಾರಿ ಕಾಯಿದೆ ಕಲಂ 32,38ಎ ರಡಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿಯುತ್ತಾ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ವಿನಂತಿಸಿ ಕೊಂಡಿರುತ್ತೇನೆ.

ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ ದಿ:10–9–2009ರಂದು ರಾತ್ರಿ ಕಛೇರಿಯಿಂದ ಗಸ್ತು ಕರ್ತವ್ಯಕ್ಕೆ 7–00 ಗಂಟೆಗೆ ಸಿಬ್ಬಂಧಿಗಳಾದ ರಾಜೇಶ್, ಕೇಶವ, ಲೋಕೇಶ ಇವರೊಂದಿಗೆ ಇಲಾಖಾ ಜೀಪಿನಲ್ಲಿ ಹೋಗಿದ್ದು,ಚಾಲಕ ಪುರುಷೋತ್ತಮ ಅಗಿದ್ದನು. ಗಸ್ತಿಗೆ ಹೋದ ಬಗ್ಗೆ ಕಛೇರಿಯಲ್ಲಿ ನಮೂದಿಸಿರುತ್ತೇನೆ. ಗಸ್ತು ಪ್ರದೇಶ ತಲುಪುವ ಮುನ್ನ ಅಕ್ಕಪಕ್ಕದ ಪರಿಸರಕ್ಕೆ ಹೋಗಿರುತ್ತೇನೆ. ಪ್ರಕರಣದಲ್ಲಿ ಜಪ್ತಾದ ವಾಹನವನ್ನು ನಿಲ್ಲಿಸುವ ಮೊದಲು ಸಂಶಯದ ಆಧಾರದ ಮೇಲೆ 2,3 ವಾಹನಗಳನ್ನು ನಿಲ್ಲಿಸಿರುತ್ತೇನೆ. ಇಲಾಖಾ ವಾಹನವನ್ನು ತೊಕೊಟ್ಟು ಕಡೆ ಮುಖ ಮಾಡಿ ನಿಲ್ಲಿಸಲಾಗಿದ್ದು, ತಕ್ಷೀರಿಗೆ ಸಂಬಂಧಿಸಿದ ಕಾರು ಸ್ಥಳಕ್ಕೆ 8–45 ಗಂಟೆಗೆ ಬಂದಿರುತ್ತಾರೆ, ತಕ್ಷೀರು ಸ್ಥಳದ ರಸ್ತೆಯಲ್ಲಿ ಸುಮಾರು ವಾಹನಗಳು ಓಡಾಡುತ್ತಿವೆ. ತಕ್ಷೀರು ಪತ್ತೆಹಚ್ಚಿದ ಸ್ಥಳದ ಅಕ್ಕಪಕ್ಕ ಅಂಗಡಿಗಳು ಇರಲಿಲ್ಲ, ಸೂಚನೆ ಕೊಟ್ಟ ನಂತರದಲ್ಲಿ ಕಾರಿನ ಚಾಲಕ ಸುಮಾರು 50 ಗಜ ಮುಂದೆ ಹೋಗಿ ವಾಹನ ನಿಲ್ಲಿಸಿದ,ಅಬಕಾರಿ ರಕ್ಷಕರಾದ ಸಾಯಿಪ್ರಸಾದ್ ಕಾರನ್ನು ನಿಲ್ಲಿಸಲು ಸೂಚನೆ ನೀಡಿತ್ತಾರೆ, ವಾಹನವನ್ನು ನಿಲ್ಲಿಸಿ ಅವರು ಹಿಂತಿರುಗಿ ನಮ್ಮ ವಾಹನವನ್ನು ಕರೆಯುವ ಮೊದಲೇ ಅರೋಪಿಗಳು ಕಾರಿನಿಂದ ಇಳಿದು ಓಡಿಹೋಗಿರುತ್ತಾರೆ, ಸಿಬ್ಬಂಧಿಗಳು ನನ್ನ ಸೂಚನೆಯಂತೆ ಕಾರಿನ ಬಾಗಿಲನ್ನು ತೆಗೆದು ಸೀಟಿನಲ್ಲಿ ಇದ್ದ 4 ಕ್ಯಾನುಗಳನ್ನು ಹೊರಗೆ ಇಟ್ಟಿರುತ್ತಾರೆ. ವಶಪಡಿಸಿಕೊಂಡ ಕಾರಿನ ಸೀಟಿನಲ್ಲಿ 35 ಲೀ ಗಾತ್ರದ 4 ಕ್ಯಾನುಗಳನ್ನು ಇಡಲು ಸ್ಥಳಾವಕಾಶ ಇದ್ದಿಲ್ಲ ಅಂದರೆ ಸರಿಯಲ್ಲ, ಸ್ಥಳೀಯರನ್ನು ಪಂಚರನ್ನಾಗಿ ಪಡೆಯುವ ನಿಟ್ಟಿನಲ್ಲಿ ಪ್ರದೇಶದಲ್ಲಿ ಓಡಾಡುವ ವಾಹನಗಳಿದ್ದ ಜನರನ್ನು ಕೇಳಿದರೂ ಯಾವುದೇ ಪ್ರಯೋಜನ ಆಗಲಿಲ್ಲ, ವಶಪಡಿಸಿದ 4 ಕ್ಯಾನುಗಳಿಗೆ ಕ್ರಮ ಸಂಖ್ಯೆ ನೀಡಿರುತ್ತೇನೆ. ಅದರೆ ಈ ಬಗ್ಗೆ ಮಹಜರಿನಲ್ಲಿ ನಮೂದಿಸಿರುವುದಿಲ್ಲ, ತಕ್ಷೀರು ಸ್ಥಳದಲ್ಲಿ ರಾತ್ರಿ 8–45 ರಿಂದ 9–45ರವರೆಗೆ ಇದ್ದೆವು, ಕ್ಯಾನಿನಿಂದ ಮದ್ಯಸಾರವನ್ನು ಶ್ರೀ ಸಾಯಿಪ್ರಸಾದ್ ಮಾದರಿ ಬಾಟಲಿಗಳಲ್ಲಿ ಬೇರ್ಪಡಿಸಿರುತ್ತಾರೆ. ವಾಹನ ಚಾಲಕನಾದ ಪುರುಷೋತ್ತಮ ಇವರನ್ನು ಮಾದರಿ ಸಾಕ್ಷಿ ಯಾಗಿ ಮಾಡಿರುವುದಿಲ್ಲ. ವಾಹನದ ಮಾಲೀಕರಿಗೆ ನೋಟಿಸು ನೀಡಿರುವುದಿಲ್ಲ ಹಾಗೂ ಅವರಿಂದ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಬಿ ವರದಿ ಮತ್ತು ಆರ್.ಸಿ ಪ್ರತಿಯ ಆಧಾರದಲ್ಲಿ ವಾಹನ ಮಾಲೀಕರನ್ನು ಅರೋಪಿಯನ್ನಾಗಿ ಮಾಡಿರುತ್ತೇನೆ. ಅರ್.ಸಿ ಮಾಲೀಕ ತಕ್ಷೀರಿನಲ್ಲಿ ಭಾಗಿಯಾಗಿದ್ದಾರೆಂದು ತೋರಿಸಲು ಬೇರೆ ಆಧಾರವಿರುವುದಿಲ್ಲ, ಮಹಜರನ್ನು ಸ್ವತಹಃ ಬರೆದಿರುತ್ತೇನೆ, ಆ ದಿವಸ ತಕ್ಷೀರು ಸ್ಥಳಕ್ಕೆ ಹೋಗದೇ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ, ಸುಳ್ಳು ಪ್ರಕರಣ ದಾಖಲಿಸುವ ಉದ್ದೇಶದಿಂದ ಮಹಜರಿನಲ್ಲಿ ಖಾಸಗಿ ಪಂಚರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ, ಮಹಜರು ಹಾಗೂ ಎಲ್ಲಾ ದಾಖಲಾತಿಗಳನ್ನು ಕಛೇರಿಯಲ್ಲಿ ತಯಾರಿಸಿದ್ದು ಎಂದರೆ ಸರಿಯಲ್ಲ, ತಕ್ಷೀರು ಸ್ಥಳಕ್ಕೆ ತಕ್ಷೀರು ದಿನದಂದು ಹೋಗಿಲ್ಲ, ಕಾರಿನಿಂದ ಯಾವುದೇ ಮದ್ಯಸಾರ ವಶಪಡಿಸಿಲ್ಲ ಎಂದು ಹೇಳುವುದು ಸರಿಯಲ್ಲ, ವಾಹನದ ಮಾಲೀಕರಿಗೂ ,ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಅಂದರೆ ಸರಿಯಲ್ಲ, ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಪ್ರಾ.ಸಾ–2:–

ಶ್ರೀ ಸಾಯಿಪ್ರಸಾದ್, ಅಬಕಾರಿ ರಕ್ಷಕ ,ಮಂಗಳೂರು ದಕ್ಷಿಣ ವಲಯ–2 ಇವರು ದಿ: 3–3–2011 ರಂದು ಈ ಪ್ರಾದಿಕಾರದ ಮುಂದೆ ಹಾಜರಾಗಿ ಪ್ರಕರಣ ಸಂದರ್ಭದಲ್ಲಿ ಪಿರ್ಯಾದುದಾರರ ಜೊತೆಯಲ್ಲಿದ್ದು ಪ್ರಕರಣ ದಾಖಲಿಸಿಕೊಂಡ ಬಗ್ಗೆ ಪ್ರಾ.ಸಾ–2ರವರಾಗಿ ಸಾಕ್ಷ್ಯ ನೀಡುತ್ತಾ, ಮಂಗಳೂರು ತಾಲೂಕು ಕೊಣಾಜೆ ಅಸೈಗೋಳಿ ಪ್ರದೇಶದಲ್ಲಿ ಅಬಕಾರಿ ಉಪ ನಿರೀಕ್ಷರೊಂದಿಗ ವಾಹನ ತಪಾಸಣೆ ನಡೆಸುತ್ತಿದ್ದ ಸಂದರ್ಭದಲ್ಲಿ ಅಬಕಾರಿ ನಿರೀಕ್ಷಕರಿಗೆ ದೂರವಾಣಿ ಮೂಲಕ ಬಂದ ಮಾಹಿತಿಯಂತೆ ಸದ್ರಿ ಪ್ರದೇಶದಲ್ಲಿ ವಾಹನ ತಪಾಸಣೆ ಕೈಗೊಂಡಾಗ ಕಪ್ಪು ಬಣ್ಣದ ಸ್ಯಾಂಟ್ರೋ ಕಾರು ಬರುತ್ತಿರುವುದನ್ನು ಕಂಡು ಅದನ್ನು ನಿಲ್ಲಿಸಲು ಕೈಸನ್ನೆ ಮಾಡಿದಾಗ ಚಾಲಕನು ವಾಹನವನ್ನು ಸುಮಾರು 20 ಗಜ ದೂರ ನಿಲ್ಲಿಸಿ ಅದರಲ್ಲಿದ್ದ ವ್ಯಕ್ತಿಗಳು ಕೆಳಗೆ ಇಳಿದು ಓಡಿ ಹೋದರು. ಅವರಲ್ಲಿ ಒಬ್ಬ ವ್ಯಕ್ತಿಯ ಮುಖ ಪರಿಚಯ ಇದ್ದು, ಅತನನ್ನು ಹಿಡಿಯಲು ಪ್ರಯತ್ನಿಸಿದರೂ ಕತ್ತಲಿನಲ್ಲಿ ಓಡಿ ತಲೆ ತಪ್ಪಿಸಿಕೊಂಡಿರುತ್ತಾನೆ.

ರಾತ್ರಿಯಾದ ಕಾರಣ ಪ್ರಯತ್ನಿಸಿದರೂ ಪಂಚರು ಯಾರೂ ಸಿಗಲಿಲ್ಲ. ನಂತರ ವಾಹನ ತಪಾಸಣೆ ಮಾಡಲು ಸರ್ಚ್ ವಾರೆಂಟ್ ಪಡೆಯಲು ಅನಾನುಕೂಲವಾದ ಕಾರಣ ಕಲಂ 54 ರಂತೆ ಸರ್ಚ್ ಮೆಮೋ ತಯಾರಿಸಿ ಕಾರನ್ನು ತಪಾಸಣೆ ಮಾಡಿದಾಗ ಕಾರಿನಲ್ಲಿ ಯಾವುದೇ ದಾಖಲೆ ಪತ್ರಗಳು ಇರದೇ 35 ಲೀ ಸಾಮರ್ಥ್ಯದ 3 ಕ್ಯಾನುಗಳಲ್ಲಿ ಒಟ್ಟು 140 ಲೀಟರು ಮದ್ಯಸಾರ ಇರುವುದು ಪತ್ತೆಯಾಯಿತು. ಕಾರಿನ ನೊಂದಣಿ ಸಂ: KA-03-MC-1828 ಆಗಿದ್ದು ನಂತರ ದೊರೆತ ಮದ್ಯಸಾರದ ಪ್ರತಿ ಕ್ಯಾನ್ ನಿಂದ 750 ಎಂಎಲ್‌ನಷ್ಟು ಮದ್ಯಸಾರವನ್ನು 4 ಬಾಟಲಿಗಳಲ್ಲಿ ಪ್ರತ್ಯೇಕಿಸಿ ಬಾಟಲಿಗಳ ಮುಚ್ಚಳಗಳನ್ನು ಸೀಲು ಮಾಡಿ ಮೊಕದ್ದಮೆ ಗುರುತು ಚೀಟಿ ಅಂಟಿಸಿ ನಂತರ ಸ್ಥಳದಲಿಯೇ ಮಹಜರನ್ನು ವಿದ್ಯುತ್ ದೀಪ ಹಾಗೂ ವಾಹನದ ಬೆಳಕಿನ ಸಹಾಯದಿಂದ ಬರೆಯಲಾಯಿತು ಎಂದು ಸಾಕ್ಷ್ಯ ನೀಡುತ್ತಾ ಮಹಜರಿನಲ್ಲಿದ್ದ ಸಹಿಯನ್ನು ನಿ.ಪಿ–1 ಎಂದು ಗುರುತಿಸಿರುತ್ತಾರೆ.

ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ ತಕ್ಷೀರು ದಿನ ಕಛೇರಿಯಿಂದ ಲೋಕೇಶ, ಕೇಶವ,ರಾಜೇಶ ಮತ್ತು ಅಬಕಾರಿ ಉಪ ನಿರೀಕ್ಷಕರು ಇವರೊಂದಿಗೆ ಇಲಾಖಾ ವಾಹನದಲ್ಲಿ ಗಸ್ತು ತಿರುಗಲು ಹೊರಟಿರುತ್ತೇವೆ, ಈ ಬಗ್ಗೆ ಅಬಕಾರಿ ಉಪ ನಿರೀಕ್ಷಕರು ಕಚೇರಿಯಲ್ಲಿ ನಮೂದು ಮಾಡಿರುತ್ತಾರೆ. ಇಲಾಖಾ ವಾಹನದ ಚಾಲಕರ ಹೆಸರು ನೆನಪಿರುವುದಿಲ್ಲ. ತಪಾಸಣೆ ಸ್ಥಳಕ್ಕೆ ತಲುಪಿದಾಗ ರಾತ್ರಿ 8–00 ಗಂಟೆ ಆಗಿತ್ತು. ಆಸೈಗೋಳಿ ರಸ್ತೆಯಲ್ಲಿ ಮುಂದಕ್ಕೆ ಹೋದರೆ ಮುಡಿಪು ಬಾಕ್ರ ಬೈಲು ಸಿಗುತ್ತದೆ. ಸದ್ರಿ ರಸ್ತೆಯಲ್ಲಿ ಸಿಟಿ ಬಸ್ ಸಂಚಾರ ಇದೆ, ತಕ್ಷೀರಿನಲ್ಲಿ ಜಪ್ತಾದ ಕಾರು ಸದ್ರಿ ಪ್ರದೇಶಕ್ಕೆ ಬರುವ ಸುಮಾರು 20 ನಿಮಿಷ ಮೊದಲು ನಾವು ಅಲ್ಲಿಗೆ ತಲುಪಿದೆವು, ಸುಮಾರು 8 ಗಜ ದೂರದಿಂದ ಸದ್ರಿ ಕಪ್ಪು ಬಣ್ಣದ ಕಾರು ಬರುತ್ತಿರುವುದನ್ನು ನಾನು ನೋಡಿರುತ್ತೇನೆ ಮತ್ತು ನಾನೇ ಕೈಸನ್ನೆ ಮಾಡಿ ಕಾರನ್ನು ನಿಲ್ಲಿಸಲು ಪ್ರಯತ್ನ ಪಟ್ಟಿರುತ್ತೇನೆ, ಕಾರು ಸುಮಾರು 20 ಅಡಿ ಮುಂದೆ ನಿಂತಿದ್ದು ಕಾರಿನ ಹಿಂಬದಿ ಸೀಟಿನಲ್ಲಿದ್ದ ಕ್ಯಾನುಗಳನ್ನು ಸಿಬ್ಬಂಧಿಗಳು ಸೇರಿ ಹೊರಗೆ ತೆಗೆದಿರುತ್ತೇವೆ. ಮೇಲೆ ದೊರೆತ 4 ಕ್ಯಾನುಗಳಿಗೆ ಕ್ರಮ ಸಂಖ್ಯೆ ನೀಡಿರುವುದಿಲ್ಲ .ತಕ್ಷೀರು ಸ್ಥಳದ ಅಕ್ಕಪಕ್ಕ ಅಂಗಡಿಗಳು ಇರುವುದಿಲ್ಲ ಹಾಗೂ ಜನಸಂಖ್ಯೆ ಇರುವ ಸ್ಥಳವಾಗಿರುವುದಿಲ್ಲ, ಬೇರೆ ವಾಹನ ಗಳನ್ನು ನಿಲ್ಲಿಸಿ ಸಾಕ್ಷಿದಾರರನ್ನು ಪಡೆಯಲು ಪ್ರಯತ್ನಪಟ್ಟರೂ ಆ ಸಮಯ ಯಾವುದೇ ವಾಹನಗಳನ್ನು ಚಾಲಕರು ನಿಲ್ಲಿಸಿಲ್ಲ, ಕಾರಣ ಸಾಕ್ಷಿದಾರರು ಬರಲಿಲ್ಲ ಎಂದೂ, ಮಹಜರನ್ನು ಅಬಕಾರಿ ಉಪ ನಿರೀಕ್ಷಕರು ಬರೆದಿರುತ್ತಾರೆ, ಪ್ರತಿ ಕ್ಯಾನಿನಿಂದ 750 ಎಂಎಲ್‌ನಂತೆ ರಸಾಯನಿಕ ಪರೀಕ್ಷೆಗೆ ಮದ್ಯಸಾರವನ್ನು ಬಾಟಲಿಗಳಲ್ಲಿ ಪ್ರತ್ಯೇಕಿಸಿರುತ್ತೇವೆ, ಜಪ್ತಾದ ಪ್ಲಾಸ್ಟಿಕ್ ಕ್ಯಾನುಗಳು ಬಿಳಿಬಣ್ಣದ್ದಾಗಿರುತ್ತದೆ, ಸ್ವತಂತ್ರ ಸಾಕ್ಷಿದಾರರನ್ನು ಪಡೆಯಲು ಪ್ರಯತ್ನಿಸಲಾದರೂ ರಾತ್ರಿಯಾದ ಕಾರಣ ಯಾರೂ ದೊರೆಯಲಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತೇನೆ ಎಂದರೆ ಸರಿಯಲ್ಲ. ಕಾರಿನ ಹಿಂಬದಿಯಲ್ಲಿ 4 ಕ್ಯಾನುಗಳನ್ನು ಇಡಲು ಸ್ಥಳಾವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ, ಮಹಜರು ದಾಖಲಾತಿಗಳನ್ನು ಕಛೇರಿಯಲ್ಲಿ ತಯಾರಿಸಿದ್ದು ಅಂದರೆ ಸರಿಯಲ್ಲ, ವಾಹನಕ್ಕೂ ತಕ್ಷೀರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ, ಮೇಲಾಧಿಕಾರಿಗಳ ಮುಲಾಜಿಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸುತ್ತಾರೆ.

ಪ್ರಾ.ಸಾ–3:–

ಪ್ರಕರಣದ ಮಾದರಿ ರವಾನೆದಾರರಾದ ಶ್ರೀ ರಾಜೇಶ್ ಅಂಚನ್, ಗೃಹರಕ್ಷಕ, ಮಂಗಳೂರು ದಕ್ಷಿಣ ವಲಯ–2 ಇವರು ದಿ:3–3–2011 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷ್ಯ ನೀಡುತ್ತಾ, ಪ್ರಕರಣಕ್ಕೆ ಸಂಬಂಧಿಸಿದ ತಲಾ 750 ಎಂಎಲ್‌ನ 4 ಮಾದರಿಗಳನ್ನು ಕೋರಿಕೆ ಪತ್ರದ ಜೊತೆ ದಿ:2–11–2009ರಂದು ರಸಾಯನಿಕ ಪರೀಕ್ಷೆಗಾಗಿ ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–2 ಇವರಿಂದ ಪಡೆದುಕೊಂಡು ರಸಾಯನಿಕ ನಿರೀಕ್ಷಕರ ಕಛೇರಿಗೆ ಒಪ್ಪಿಸಿರುತ್ತೇನೆ. ಹಾಗೂ ರಸಾಯನಿಕ ಪರೀಕ್ಷೆ ಆದ ನಂತರ ವಿಶ್ಲೇಷಣಾ ವರದಿಯೊಂದಿಗೆ ಬಾಟಲಿಗಳನ್ನು ದಿ:17–9–2010ರಂದು ಅಬಕಾರಿ ಉಪ ನಿರೀಕ್ಷಕರುಮಂಗಳೂರು ದಕ್ಷಿಣ ವಲಯ–2 ಇವರಿಗೆ ಒಪ್ಪಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ರಕ್ಷಣಾ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ ಸೀಲು ಹಾಕಿದ ಮಾದರಿ ಸೀಸೆಗಳನ್ನು ರಾಸಯನಿಕ ವಿಶ್ಲೇಷಕರ ಕಛೇರಿಗೆ ಕೊಂಡು ಹೋಗಿರುತ್ತೇನೆ, ಬಾಟಲಿಗಳ ಮೇಲೆ ಏನೂ ವಿವರ ಬರೆದಿತ್ತು ಎಂಬ ಬಗ್ಗೆ ಗಮನಿಸಿಲ್ಲ ಎಂದೂ, ಯಾವುದೇ ಮಾದರಿ ಸೀಸೆಗಳನ್ನು ರಸಾಯನಿಕ ವಿಶ್ಲೇಷಕರ ಕಛೇರಿಗೆ ಕೊಂಡುಹೋಗಿಲ್ಲ ಮತ್ತು ರಸಾಯನಿಕ ವಿಶ್ಲೇಷಣಾ ವರದಿಗೆ ಒಳಪಟ್ಟ ಮಾದರಿ ಸೀಸೆಗಳನ್ನು ವಾಪಸ್ಸು ವಲಯ ಕಛೇರಿಗೆ ತಂದು ಕೊಟ್ಟಿಲ್ಲ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸುತ್ತಾರೆ.

ಡಿಡಬ್ಲ್ಯೂ–1

ರಕ್ಷಣಾ ಪರ ಸಾಕ್ಷಿದಾರರಾದ ಶ್ರೀ ಅಬ್ದುಲ್ ಮಜೀದ್,ಅಸೀನಾ ಮಂಜಿಲ್, ದರ್ಗ ರಸ್ತೆ ನ್ಯೂ ಕಾಲೊನಿ ಕೊಡಂಕೂರು, ಉಡುಪಿ ಇವರು ದಿ: 5–5–2011ರಂದು ಈ ಪ್ರಾಧಿಕಾರದ ಮುಂದೆ ರಕ್ಷಣಾ ಸಾಕ್ಷಿ ನೀಡುತ್ತಾ, ತಾನು 2003ನೇ ವರ್ಷದ ಮೊಡಲ್ ಆಗಿರುವ ಸ್ಯಾಂಟ್ರೋ ಕಾರು ಸಂ: KA-03-MC-1828 ಇದರ ಮಾಲೀಕನಾಗಿದ್ದು, ವಾಹನವನ್ನು ತನ್ನ ಸ್ವಂತ ಉಪಯೋಗಕ್ಕಾಗಿ 2003ನೇ ವರ್ಷದಲ್ಲಿ ಖರೀದಿಸಿರುತ್ತೇನೆ. ತಾನು ಉಡುಪಿಯಲ್ಲಿ ಜನರಲ್ ಫುಟ್‌ವೇರ್ ಎಂಬ ಹೋಲ್‌ಸೇಲ್ ಚಪ್ಪಲಿ ಅಂಗಡಿ ನಡೆಸುತ್ತಿದ್ದು ತಿಂಗಳಿಗೆ ಈ ಅಂಗಡಿಯಲ್ಲಿ 3 ಲಕ್ಷ turn over ಇರುತ್ತದೆ. ಬೈತ್ತಾರ್ ಮೊಹಿದ್ದೀನ್ ಎಂಬವನು 2005ನೇ ವರ್ಷದಿಂದ ನನ್ನ ಗೆಳೆಯನಾಗಿರುತ್ತಾನೆ. ದಿ: 8–9–2009 ರಂದು ತನ್ನ ಕಾರನ್ನು ಸುಮಾರು 5 ದಿವಸಗಳ ಉಪಯೋಗಕ್ಕಾಗಿ ತನ್ನಿಂದ ಪಡೆದುಕೊಂಡು ಹೋಗಿದ್ದ. ಹಾಗೂ ಕಾರನ್ನು ಅತನಿಗೆ ಕೊಡುವಾಗ ಯಾವುದೇ ಕಾನೂನುಬಾಹಿರ ಚುಟುವಟಿಕೆಗಳಲ್ಲಿ ಅದನ್ನು ತೊಡಗಿಸಬಾರದಾಗಿ ಸೂಚನೆ ಕೊಟ್ಟಿರುತ್ತೇನೆ, ದಿ: 11–9–09 ರಂದು ದಿನಪ್ರತಿಕೆಯಲ್ಲಿ ಸದ್ರಿ ತನ್ನ ಕಾರನ್ನು ಅಬಕಾರಿ ಇಲಾಖೆಯವರು ಜಪ್ತುಮಾಡಿದ್ದಾರೆ ಎಂದು ಗೊತ್ತಾಗಿರುತ್ತದೆ, ಆ ಪ್ರಕಾರ ನಾನು ಮಂಗಳೂರಿನ ಸಂಬಂಧಪಟ್ಟ ಅಬಕಾರಿ ಕಛೇರಿಯಲ್ಲಿ ವಿಚಾರಿಸಲಾಗಿ ಕಾರಿನ ಮೇಲೆ ಪ್ರಕರಣ ದಾಖಲಾಗಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಗೆಳೆಯ ಬೈತ್ತಾರ್ ಇವರಲ್ಲಿ ವಿಚಾರಿಸಲು ಮೊಬೈಲ್ ಪೋನ್ ಮಾಡಿದಾಗ ಆತನ ಪೋನ್ ಸ್ವಿಚ್ ಆಫ್ ಅಗಿತ್ತು , ಮತ್ತೇ ಪ್ರಯತ್ನಪಟ್ಟು ಅತ ನನಗೆ ಸಿಕ್ಕಿದಾಗ ಕಾರಿನ ಮೇಲೆ ಸುಳ್ಳು ಪ್ರಕರಣ ಅಬಕಾರಿ ಇಲಾಖೆಯವರು ದಾಖಲಿಸಿರುತ್ತಾರೆ ಎಂದೂ, ನಂತರದಲ್ಲಿ

ವಾಹನದ ಮಧ್ಯಂತರ ಬಿಡುಗಡೆಗೆ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿ ವಾಹನವನ್ನು ಮಧ್ಯಂತರ ಬಿಡುಗಡೆ ಪಡೆದುಕೊಂಡಿರುತ್ತೇನೆ. ಕಾರಿನಲ್ಲಿ ಅಕ್ರಮ ಮದ್ಯಸಾರ ಸಾಗಾಣಿಕೆಗೆ ಸಂಬಂಧಿಸಿದ ಪ್ರಕರಣದಲ್ಲಿ ಪ್ರತ್ಯೇಕ್ಷ/ಪರೋಕ್ಷವಾಗಿ ತಾನು ಭಾಗಿಯಾಗಿರುವುದಿಲ್ಲ ಹಾಗೂ ಕಾರಿನಲ್ಲಿ ಯಾವುದೇ ರೀತಿಯ ಅಕ್ರಮ ಮದ್ಯಸಾರ ಸಾಗಾಣಿಕೆ ಆಗದೇ ಅಧಿಕಾರಿಗಳು ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ, ಕಾರಣ ನನ್ನ ವಾಹನವನ್ನು ಬಿಡುಗಡೆ ಮಾಡಿ ಅಂತಿಮ ಅದೇಶ ಹೊರಡಿಸಬೇಕಾಗಿ ಪ್ರಾಧಿಕಾರದ ಮುಂದೆ ಪ್ರಾರ್ಥನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ರಕ್ಷಣಾ ಸಾಕ್ಷಿದಾರರು ಸರ್ಕಾರಿ ಅಭಿಯೋಜಕರ ಪಾಟೀ ಸವಾಲಿಗೆ ಉತ್ತರಿಸುತ್ತಾ ಮಿತ್ರ ಬೈತ್ತಾರ್ ಮೊಹಿದ್ದೀನ್ ತನಗಿಂತ 2,3 ವರ್ಷ ಕಿರಿಯವನ್ನಾಗಿದ್ದು ಸಂಬಂಧಿಕನಲ್ಲ, ಮದುವೆ ಕಾರ್ಯಕ್ರಮವೊಂದಕ್ಕೆ ಬಂದ ಸಂದರ್ಭದಲ್ಲಿ ಅತನನ್ನು ಭೇಟಿ ಮಾಡಿ ಮಿತ್ರನಾದೆ ತನ್ನ ಮನೆ ಉಡುಪಿಯಲ್ಲಿದ್ದು ಆತನ ಮನೆ ಮಂಗಳೂರಿನ ಕುತ್ತಾರ್ ನಲ್ಲಿದ್ದು,ಉಡುಪಿಗೂ ಕುತ್ತಾರಿಗೂ ಸಾಧಾರಣಾ 75 ಕಿ.ಮಿ ಅಂತರವಿರುತ್ತದೆ,ವರ್ಷಕ್ಕೆ 3 ಸಲ ಅವನು ನನ್ನ ಉಡುಪಿ ಅಂಗಡಿಗೆ ಬಂದು ಭೇಟಿಯಾಗಿರಬಹುದೆಂದು ,ಉಡುಪಿಗೆ ಬಂದ ಸಮಯದಲ್ಲಿ ತನ್ನ ಜೊತೆ ಊಟ ಮಾಡಿ ಹೋಗುತ್ತಿದ್ದನು,ಆತನ ತೀರಿಹೋದ ತಂದೆ ಹಾಗೂ ತಾಯಿಯ ಹೆಸರು / ಪರಿಚಯ ಇರುವುದಿಲ್ಲ, ವಾಹನ ಜಪ್ತು ಮಾಡಿದ ಬಗ್ಗೆ ವಿಚಾರಣೆಗಾಗಿ 2, 3 ಸಲ ಅತನನ್ನು ಭೇಟಿ ಮಾಡಿದೆ,ಹೊರತು ವಾಹನ ಜಪ್ತಿಯಾಗುವ ಮೊದಲು ಅವರ ಮನೆಗೆ / ನೆರೆ ಮನೆಗೆ ಭೇಟಿ ಮಾಡಿಲ್ಲ ,ಮತ್ತು ಅವರ ಮನೆಯಲ್ಲಿ ಎಷ್ಟು ಜನ/ಯಾರ್ಯಾರು ಇದ್ದಾರೆ ಎಂಬ ಬಗ್ಗೆ ಮಾಹಿತಿ ಇರುವುದಿಲ್ಲ, ಕಾರನ್ನು ಅತನಿಗೆ ಕೊಡುವ ಪೂರ್ವದಲ್ಲಿ ಅತನ ಪೂರ್ವಾಪರ ತಿಳಿಯಲು ಪ್ರಯತ್ನ ಮಾಡಿಲ್ಲ, ಅತನಿಗೆ ಕಾರನ್ನು ಕೊಡುವ ಮೊದಲು ಅಕ್ರಮ ಚಟುವಟಿಕೆಗೆ ಬಳಸಬಾರದಾಗಿ ಅತನಿಂದ ಯಾವುದೇ ಲಿಖಿತ ಪತ್ರ ಪಡೆದಿರುವುದಿಲ್ಲ, ಕಾರನ್ನು ಎಲ್ಲಿಗೆ ಕೊಂಡುಹೋದ ಎಂಬ ಬಗ್ಗೆ ಗೊತಿರುವುದಿಲ್ಲ ಹಾಗೂ ಅವನು ಕೂಡಾ ತಿಳಿಸಿರುವುದಿಲ್ಲ, ಕಾರನ್ನು ನನ್ನ ಮತ್ತು ಕುಟುಂಬದ ಉಪಯೋಗಕ್ಕೆ ಬಳಸುತ್ತಿದ್ದೆ, ಕಾರನ್ನು ದಿ: 10–9–2009ರಂದು ಅಬಕಾರಿ ಇಲಾಖೆಯವರು ಮಾಹಿತಿ ಆಧಾರಿಸಿ ತಪಾಸಣೆ ಮಾಡಿ ಪ್ರಕರಣ ಸಂದರ್ಭದಲ್ಲಿ ತಲೆಮರೆಸಿಕೊಂಡಿರುವ ಚಾಲಕನನ್ನು ಅಬಕಾರಿ ಅಧಿಕಾರಿಗಳು ಗುರುತಿಸಿದರು ಎಂದರೆ ಸರಿಯಲ್ಲ, ಆ ಸಂದರ್ಭ ಅಬಕಾರಿ ರಕ್ಷಕ ಸಾಯಿ ಪ್ರಸಾದ್ ಸುವರ್ಣರವರು ಕಾರಿನ ಚಾಲಕನನ್ನು ಗುರುತಿಸಿದ್ದು, ಅತ ಬೈತ್ತಾರ್ ಮೊಹಿದ್ದೀನ್ ಎಂದು ಗೊತ್ತಾಯಿತು ಅಂದರೆ ಸರಿಯಲ್ಲ, ಕಾರನ್ನು ತಪಾಸಣೆ ಮಾಡಿದಾಗ ಹಿಂಬದಿ ಸೀಟಿನಲ್ಲಿ 35 ಲೀ ಸಾಮರ್ಥ್ಯ ಇರುವ 4 ಪ್ಲಾಸ್ಟಿಕ್ ಕ್ಯಾನುಗಳಿದ್ದು ಅವುಗಳಲ್ಲಿ ಮದ್ಯಸಾರ ಇತ್ತು ಮತ್ತು ಮದ್ಯಸಾರವನ್ನು ತನ್ನ ಕಾರಿನಲ್ಲಿ ಯಾವುದೇ ಪರವಾನಿಗೆ ಇಲ್ಲದೇ ಸಾಗಾಟ ಮಾಡಲಾಗಿತ್ತು ಎಂದರೆ ಸರಿ ಅಲ್ಲ, ಕ್ಯಾನನ್ನು ನಿಶಾನೆ –1ರಂತೆ ಮಹಜರು ಜರುಗಿಸಿ ಅಬಕಾರಿ ಇಲಾಖೆಯವರು ವಶಪಡಿಸಿಕೊಂಡಿದ್ದು ಸದ್ರಿ ಅಕ್ರಮ ಸಾಗಾಣಿಕೆಯಲ್ಲಿ ತನ್ನ ಮಿತ್ರ ಚಾಲಕ ಬೈತ್ತಾರ್ ಮೊಹಿದ್ದೀನ್ ಸಕ್ರಿಯ ಪಾತ್ರ ವಹಿಸಿದ್ದ ಎಂದರೆ ಸರಿಯಲ್ಲ, ತನ್ನ ಕಾರಿನಲ್ಲಿ ಈ ರೀತಿ ಅಕ್ರಮ ಸಾಗಾಣಿಕೆ ಆಗದಂತೆ ಮುಂಜಾಗ್ರತಾ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ, ಮುಖ್ಯ ವಿಚಾರಣೆಯಲ್ಲಿ ನೀಡಲಾದ ಹೇಳಿಕೆಗಳು ಸತ್ಯಕ್ಕೆ ದೂರವಾದ ಆಂಶ, ಹಾಗೂ ಅಂತಿಮ ಅದೇಶ ತಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಎಂದರೆ ಸರಿಯಲ್ಲ ಎಂದು ಪಾಟೀ ಸವಾಲಿಗೆ ಉತ್ತರಿಸಿರುತ್ತಾರೆ.

ಪ್ರಕರಣದಲ್ಲಿ ರಕ್ಷಣಾ ಪರ ವಕೀಲರ ಹಾಗೂ ಎಡಿಪಿ ರವರ ವಾದ ವಿವಾದಗಳನ್ನು ಆಲಿಸಲಾಯಿತು. ಪ್ರಕರಣ ದಾಖಲೆ ಸಂದರ್ಭದಲ್ಲಿ ಸರ್ಚ್ ವಾರೆಂಟ್ ಪಡೆಯದೇ ಇರುವುದು, ತನಿಖಾಧಿಕಾರಿಗಳು ವಾಹನದ ಮಾಲೀಕರಿಗೆ ನೋಟಿಸು ನೀಡಲಿಲ್ಲ. ಚಾಲಕ ಶ್ರೀ. ಪುರುಷೋತ್ತಮ ಇವರನ್ನು ಸಾಕ್ಷಿಯನ್ನಾಗಿ ಪರಿಗಣಿಸಿಲ್ಲ, ಸ್ವತಂತ್ರ ಸಾಕ್ಷಿದಾರರನ್ನು ಪ್ರಕರಣದಲ್ಲಿ ಒಳಪಡಿಸಲಿಲ್ಲ ಎಂಬ ಅಂಶಗಳನ್ನು ಎತ್ತಿ ಹಿಡಿದು ಪ್ರಕರಣವನ್ನು ಕೈಬಿಡಬೇಕೆಂದು ರಕ್ಷಣಾ ವಕೀಲರು ವಾದವನ್ನು ಮಂಡಿಸಿರುತ್ತಾರೆ. ಸಹಾಯಕ ಅಭಿಯೋಗ ನಿರ್ದೇಶಕರು ಪ್ರತಿವಾದ ಮಂಡಿಸುತ್ತ ಪ್ರಕರಣವು ಯಾವುದೇ ಕ್ರಿಮಿನಲ್ ಪ್ರಕರಣವಾಗಿರದೇ ಮುಟ್ಟುಗೋಲು ನಡವಳಿಯಾಗಿರುವುದರಿಂದ ಅಭಿಯೋಗದ ಪರ ವಿಚಾರಿಸಲಾದ ಇಲಾಖಾ ಸಾಕ್ಷಿಗಳ ಸಾಕ್ಷ್ಯದಲ್ಲಿ ಕೆಲವೊಂದು ಸಣ್ಣಮಟ್ಟ ವ್ಯತಿರೀಕ್ತತೆಗಳು ಕಂಡುಬಂದರೂ ಅದು ಅಭಿಯೋಜನೆಗೆ ಮಾರಕವಾಗುವುದಿಲ್ಲ. ಅಧಿಕೃತ ಪ್ರಾಧಿಕಾರದಿಂದ ವಾಹನದ ಮಾಲೀಕರಿಗೆ ಅಬಕಾರಿ ಕಾಯಿದೆ ಕಲಂ 43 ಬಿ ಅಡಿಯಲ್ಲಿ ಕಾರಣ ಕೇಳಿ ನೋಟಿಸು ನೀಡಲಾಗಿದ್ದು, ತನಿಖಾದಿಕಾರಿಯವರಿಂದ ಮತ್ತೊಮ್ಮೆ ವಾಹನದ ಮಾಲೀಕರಿಗೆ ನೋಟಿಸು ಕೊಡುವ ಪ್ರಮೇಯ ಇರುವುದಿಲ್ಲ ಹಾಗೂ ಪೂರ್ಣ ಪ್ರಮಾಣದಲ್ಲಿ ಇಲಾಖಾ ಸಾಕ್ಷಿಗಳನ್ನು ಒಳಪಡಿಸಲಾಗಿರುವುದರಿಂದ ವಾಹನದ ಚಾಲಕನ ಸಾಕ್ಷಿಯು ಅವಶ್ಯಕತೆ ಇರುವುದಿಲ್ಲ. ಸಾಕ್ಷ್ಯವು ಗುಣತ್ಮಾಕವಾಗಿರಬೇಕೇ ಹೊರತು ಸಾಕ್ಷ್ಯದ ಒಟ್ಟು ಪ್ರಮಾಣವನ್ನು ಗಣನೆಗೆ ತೆಗೆದುಕೊಳ್ಳಲಾರದು. ಯಾವುದೇ ಒಂದು ಸಂಗತಿಯನ್ನು ಕಾನೂನಡಿ ಸಾಬೀತು ಪಡಿಸಬೇಕಾದರೆ ಒಂದು ನಿರ್ಧಿಷ್ಟ ಪ್ರಮಾಣದ ಸಾಕ್ಷಿಗಳು ಬೇಕು ಎಂಬಂತೆ ಕಾನೂನು ಅಂಶ ಇರುವುದಿಲ್ಲ. ಈ ಕಾನೂನಿನ ಅಂಶವನ್ನು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 134ರಡಿ ಸ್ಪಷ್ಟ ಪಡಿಸಲಾಗಿರುವುದು. ಅಭಿಯೋಗದ ಪರ ವಿಚಾರಿಸಲಾದ ಇಲಾಖಾ ಸಾಕ್ಷಿಗಳು ಪ್ರಕರಣವನ್ನು ಪತ್ತೆಹಚ್ಚಿ ಮುಂದಿನ ತನಿಖೆ ನಡೆಸಿ ಅರೋಪಿ /ವಾಹನದ ಮಾಲೀಕರು ತನ್ನ ವಾಹನವನ್ನು ಈ ಕೃತ್ಯದಲ್ಲಿ ನಿಯೋಜಿಸಿರುವುದು ಅಕ್ರಮವಾಗಿದ್ದು, ಯಾವುದೇ ಮುಂಜಾಗತ್ರೆಯನ್ನು ತೆಗೆದುಕೊಳ್ಳದೇ ಇರುವುದು ಸಾಭೀತಾಗಿರುತ್ತದೆ. ಈ ಬಗ್ಗೆ ಇಲಾಖಾ ಸಾಕ್ಷಿಗಳು ಬಹಳ ಸ್ಪಷ್ಟವಾಗಿ ಹಾಗೂ ತಮ್ಮ ಕರ್ತವ್ಯದ ನೆಲೆಯಲ್ಲಿ ಪ್ರಮಾಣಿಕವಾಗಿ ಸಾಕ್ಷ್ಯ ನೀಡಿರುವುದು ಹಾಗೂ ಸ್ವತಂತ್ರ ಸಾಕ್ಷಿದಾರರನ್ನು ಪ್ರಕರಣದಲ್ಲಿ ಒಳಪಡಿಸಲಾದರೂ ಸದ್ರಿಯವರ ಸಾಕ್ಷಿಗಳು ಅಭಿಯೋಜನ ಪರ ಪೂರಕವಾಗಬಹುದೆಂದು ಭಾವಿಸಲು ಬರುವುದಿಲ್ಲ. ಹಾಗೂ ಈ ಅಂಶದಿಂದ ಯಾವುದೇ ರೀತಿಯಲ್ಲಿ ಸಾಕ್ಷ್ಯವು ಮುಟ್ಟುಗೋಲು ನಡವಳಿಗೆ ಭಾದಕವಾಗುವುದಿಲ್ಲ. ವಾಹನದ ಮಾಲೀಕರು ವಿಚಾರಣಾ ವೇಳೆಯಲ್ಲಿ ತನ್ನ ರಕ್ಷಣಾ ಸಾಕ್ಷ್ಯ ಹೇಳಿಕೊಂಡಿದ್ದರೂ ವಾಹನವನ್ನು ಅಕ್ರಮ ಸಾಗಾಣಿಕೆಗೆ ಬಳಸಲಾಗಿಲ್ಲ ಎಂಬ ಆಂಶದ ಬಗ್ಗೆ ಸೂಕ್ತ ಪುರಾವೆಗಳನ್ನು ಒದಗಿಸಿ ತನ್ನ ನಿರಾಪರಾಧಿತ್ವವನ್ನು ಸಾಭೀತುಪಡಿಸಿರುವುದಿಲ್ಲ. ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ಯಲ್ಲಿ ಹೇಳಿದ ರುಜುವಾತಿನ ಭಾರವನ್ನು ವಾಹನದ ಮಾಲೀಕರು ನಿಭಾಯಿಸುವಲ್ಲಿ ವಿಫಲರಾಗಿರುವುದು ಸಾಭೀತುಪಡಿಸುತ್ತದೆ. ವಾಹನ ಶೋಧನೆ ಸಂದರ್ಭದಲ್ಲಿ ಕಲಂ 53 ರಡಿ ಶೋಧನಾ ವಾರೆಂಟನ್ನು ಪಡೆಯದೇ ಇರುವುದು ಅಭಿಯೋಗದ ವಿಫಲತೆ ಎಂಬುದಾಗಿ ಪರಿಗಣಿಸಲಾಗದು. ಏಕೆಂದರೆ ಕಲಂ 54 ರಡಿ ರೆಕಾರ್ಡ್ ಆಫ್ ರೀಜನ್ಸ್‌ನ್ನು ದಾಖಲಿಸದೇ ಇರುವುದು ಕಾನೂನಡಿ ಅಜ್ಞಾಪಕವಾಗಿರುವುದಿಲ್ಲ ಎಂಬುದನ್ನು ಈ ಕೆಳಕಂಡಂತೆ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪನ್ನು ಆಧರಿಸಿ ವ್ಯಾಖ್ಯಾನಿಸಬೇಕಾಗಿರುತ್ತದೆ. "ಶೋಧನಾ ವಾರೆಂಟ್‌ಗಳನ್ನು ಪಡೆಯಲು ವಿಫಲರಾದ ಬಗ್ಗೆ ಕಾರಣಗಳನ್ನು ದಾಖಲಿಸದೇ ಇರುವುದು ಕೇವಲ ಕಾನೂನಿನ ಪ್ರಕ್ರಿಯೆಯಲ್ಲಿ ಒಂದು ಅನಿಯಮತೆಯಾಗಿದ್ದು ಕೇವಲ ಅದೇ ಒಂದು ಕಾರಣದಡಿ ಇಡೀ ಶೋಧನೆಯನ್ನು ಅಥವಾ ಮುಟ್ಟುಗೋಲು ವ್ಯವಹರಣೆಯನ್ನು ಅಥವಾ ಪ್ರಾಧಿಕಾರವು ಮಾಡಿದ ಅಂತಿಮ ಮುಟ್ಟುಗೋಲು ಅದೇಶವನ್ನು

ಕಾನೂನಿನಡಿ ಅಸಿಂಧುವೆಂದು ಘೋಷಿಸಲು ಬರುವುದಿಲ್ಲ. ಶೋಧನೆಯನ್ನು ಮಾಡುವ ಮೊದಲು ವಾರೆಂಟ್ ಪಡೆದು ಕೊಳ್ಳದೇ ಇರುವ ಬಗ್ಗೆ ಅಥವಾ ವಾರೆಂಟ್ ಪಡೆಯಲು ವಿಫಲರಾದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕಾರಣಗಳನ್ನು ದಾಖಲಿಸದೇ ಇರುವುದು ಆರೋಪಿಯ ಹಕ್ಕಿಗೆ ಅಥವಾ ಆತನ ಹಿತಾಸಕ್ತಿಗೆ ದಕ್ಕೆಯನ್ನು ಉಂಟು ಮಾಡುತ್ತದೆ ಎಂಬುದಾಗಿ ಆರೋಪಿ ತೋರಿಸಿ ಕೊಡಬೇಕಾಗುತ್ತದೆ. ಶೋಧನಾ ವಾರೆಂಟನ್ನು ಪಡೆಯಲೇ ಬೇಕು ಎಂಬುದು ಖಡ್ಡಾಯವಾಗಿರುವುದಿಲ್ಲ ಅಥವಾ ಅಜ್ಞಾಪಕವಾಗಿರುವುದಿಲ್ಲ. ಶೋಧನಾ ವಾರೆಂಟನ್ನು ಪಡೆದುಕೊಳ್ಳಲು ವಿಫಲರಾದ ಬಗ್ಗೆ ಕಾರಣಗಳನ್ನು ನಮೂದಿಸದೇ ಇರುವುದು ಇಡೀ ಶೋಧನೆ ಮತ್ತು ಅದರ ನಂತರದ ಮುಟ್ಟುಗೋಲು ವ್ಯವಹರಣೆಯನ್ನು ಅಥವಾ ಅಂತಿಮ ಮುಟ್ಟುಗೋಲು ಅದೇಶ ಅಸಿಂಧುಗೊಳಿಸುವುದಿಲ್ಲ. ಈ ರೀತಿ ಅಸಿಂಧುಗೊಳಿಸಿದರೇ ಹಾಡುಹಗಲೇ ಅಥವಾ ಕಣ್ಣೆದುರೇ ಅಕ್ರಮ ಮದ್ಯ ಸಮೇತ ಪ್ರಕರಣದ ಅಪರಾಧಿಗಳನ್ನು ಕೈಚೆಲ್ಲಬೇಕಾಗುತ್ತದೆ ಕಾನೂನನ್ನು ಅಪರಾಧಿಗಳಿಗೆ ಸಹಾಯವಾಗುವ ರೀತಿ ಯಲ್ಲಿ ಅರ್ಥಮಾಡಿಕೊಂಡಲ್ಲಿ ಇನ್ನೂ ಹೆಚ್ಚಿನ ಅಪರಾಧಗಳು ಆಗುವ ಸಂಭಾವ್ಯತೆಗಳು ಜಾಸ್ತಿ. ಆದುದರಿಂದ ಕರ್ನಾಟಕ ಅಬಕಾರಿ ಕಾಯಿದೆ ಕಲಂ 54 ರ ಹಿಂದಿನ ಉದ್ದೇಶವನ್ನು ಅರಿತು ವ್ಯಾಖ್ಯಾನಿಸಬೇಕಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಗೌರವಾನ್ವಿತ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠ ನೀಡಿದ ತೀರ್ಪು ಸಂ: ILR: 2004: KAR ಇದರ ಪುಟ ಸಂ:527ರಲ್ಲಿ ವಿವರವಾಗಿ ಪ್ರಸ್ತಾವಿಸಲಾಗಿದೆ."ಹಾಗೂ ಪ್ರಕರಣದಲ್ಲಿ ಸ್ವತಂತ್ರ ಸಾಕ್ಷಿಗಳ ಹೇಳಿಕೆಗಳು ಸಿಂಧು ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ವಾಹನದಲ್ಲಿ ತನ್ನ ತಿಳುವಳಿಕೆಗೆ ಬಾರದೇ ಮದ್ಯ ಸಾಗಾಟವಾಗಿರುವುದು ಎಂಬ ಆಂಶವನ್ನು ವಾಹನದ ಮಾಲೀಕರು ಪುರಾವೆಗಳೊಂದಿಗೆ ಸ್ವಷ್ಟ ಪಡಿಸದೇ ಇರುವುದು ಹಾಗೂ ಇಲಾಖಾ ಅಧಿಕಾರಿಗಳು ಸುಳ್ಳು ಪ್ರಕರಣವನ್ನು ದಾಖಲಿಸಿ ಕೊಂಡಿರುವುದು ಎಂದು ರಕ್ಷಣಾ ಹೇಳಿಕೆಗಳನ್ನು ನೀಡಿರುವರಾದರೂ ಈ ಬಗ್ಗೆ ಸಾಕ್ಷ್ಯಾಧಾರಗಳನ್ನು ಒದಗಿಸಿ ರುಜುವಾತುಪಡಿಸಲು ವಿಫಲರಾಗಿರುತ್ತಾರೆ. ಕಾರಣ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ತಮ್ಮ ಪ್ರತಿವಾದವನ್ನು ಮಂಡಿಸಿರುತ್ತಾರೆ.

ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಮದ್ಯಸಾರದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ವಿಶ್ಲೇಷಕರು, ಮಂಗಳೂರು ವಲಯ ಇವರು ದಿ: 30–12–2009ರಂದು ನೀಡಿರುವ ವಿಶ್ಲೇಷಣಾ ವರದಿಯಲ್ಲಿ ಮಾದರಿಗಳಲ್ಲಿ ಮದ್ಯಸಾರ ಪ್ರಮಾಣ ಎಲ್ಲಾ ಮಾದರಿಗಳಲ್ಲೂ ಅನುಕ್ರಮವಾಗಿ 93%,94%,95% ಮತ್ತು 95 ಇರುವುದಾಗಿ ಹಾಗೂ ಮದ್ಯಸಾರವನ್ನು ಭಟ್ಟಿ ಇಳಿಸಿದ ನಂತರದಲ್ಲಿ ಮದ್ಯಪೇಯಗಳನ್ನು ತಯಾರಿಸಲು ಹಾಗೂ ಕೈಗಾರಿಕಾ / ಉದ್ದಿಮೆಗಳ ಬಳಕೆಯಲ್ಲಿ ಉಪಯೋಗಿಸಬಹುದೆಂದು ದೃಡೀಕರಿಸಲ್ಪಟ್ಟಿರುವುದರಿಂದ, ಜಪ್ತುಪಡಿಸಿಕೊಂಡ ವಸ್ತುವು ಅಬಕಾರಿ ಸೊತ್ತು (ಮದ್ಯಸಾರ) ಆಗಿರುವುದು ಸಾಭೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಈ ಪ್ರಕರಣದ ಫಿರ್ಯಾದುದಾರರು/ತನಿಖಾಧಿಕಾರಿಯವರು, ಸಹ ಸಾಕ್ಷಿದಾರರು ಹಾಗೂ ರಸಾಯನ ಮಾದರಿ ರವಾನೆದಾರರು ಪ್ರಕರಣಕ್ಕೆ ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರಗಳ ಮೇಲೆ ಮತ್ತು ರಕ್ಷಣಾ ಸಾಕ್ಷಿದಾರರು ನೀಡಿರುವ ಹೇಳಿಕೆಗಳು ಹಾಗೂ ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ: 10–9–2009ರಂದು ಸ್ಯಾಂಟ್ರೋ ಹುಂಡೈ ಕಾರು ಸಂ: KA-03-MC-1828 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಆರೋಪಿ ಮದ್ಯಸಾರವನ್ನು ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–2 ಇವರ ಪ್ರ.ಮಾ.ವ ಸಂ: 15/2009–10, ದಿ:10–9–2009ರಂತೆ ಪ್ರಕರಣ ದಾಖಲಿಸಿ ಕೊಂಡಿರುವುದು ಮತ್ತು ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿ ಪ್ರಕಾರ ಮದ್ಯಸಾರ ಎಂದು ದೃಢ ಪಟ್ಟಿರುವುದು ಹಾಗೂ ಪ್ರಕರಣದಲ್ಲಿ ಜಪ್ತು ಮಾಡಲ್ಪಟ್ಟ ಮದ್ಯಸಾರವನ್ನು ಅನಧಿಕೃತವಾಗಿ ವಾಹನದಲ್ಲಿ ಸಾಗಾಟ ಮಾಡಲಾಗಿಲ್ಲ ಎಂಬುದನ್ನು ವಾಹನದ ಮಾಲೀಕರು ಪ್ರಾಧಿಕಾರದ ಮುಂದೆ ರಕ್ಷಣಾ ಸಾಕ್ಷಿ ವಿಚಾರಣೆ ವೇಳೆಯಲ್ಲಿ ಸಾಭೀತುಪಡಿಸಲು ವಿಫಲರಾಗಿ ಕರ್ನಾಟಕ ಅಬಕಾರಿ ಕಾಯಿದೆ 43 ಬಿ ರಡಿಯಲ್ಲಿ ಹೇಳುವಂತಹ ರುಜುವಾತುವಿನ ಭಾರವನ್ನು ಸಮಂಜಸವಾಗಿ ನಿಭಾಯಿಸದೇ ಇರುವುದರಿಂದ ಅಭಿಯೋಜನ ಪರ ಮಂಡಿಸಿದ ಸಾಕ್ಷ್ಯಾಧಾರ ವನ್ನು ಅವಲಂಬಿಸಿ ವಾಹನದ ಮಾಲೀಕರ ವಿರುದ್ಧ ಪ್ರತಿಕೂಲ ಭಾವನೆಯನ್ನು ಹೊಂದಿ ವಾಹನದ ಮಾಲೀಕರೇ ಈ ಕೃತ್ಯವನ್ನು ಎಸಗಿರುತ್ತಾರೆ ಎಂಬ ಬಗ್ಗೆ ನಿರ್ಣಯಕ್ಕೆ ಬರಲು ಸಾಕಷ್ಟು ವಿಷಯ ಸಾಮಾಗ್ರಿಗಳು ಕಂಡು ಬಂದಿರುವುದರಿಂದ, ಸದ್ರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದರಿಂದ ಎರಡನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿರುತ್ತದೆ.

ಅಬಕಾರಿ ಸೊತ್ತುಗಳ ಅಕ್ರಮ ಸಾಗಾಟಕ್ಕೆ ವಾಹನವನ್ನು ಬಳಸಿರುವುದಿಲ್ಲ ಎಂಬ ಅಂಶವನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಭೀತುಪಡಿಸುವುದು ವಾಹನದ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಪ್ರಕರಣದಲ್ಲಿ ವಾಹನದ ಮಾಲೀಕರು ಪ್ರಾಧಿಕಾರದ ಮುಂದೆ ಹಾಜರಾಗಿ ನೀಡಿರುವ ಹೇಳಿಕೆಗಳನ್ನು ಪರಿಶೀಲಿಸಲಾಗಿ ವಾಹನವನ್ನು ಅವರ ಸ್ನೇಹಿತರಾದ ಶ್ರೀ.ಬೈತ್ತಾರ್ ಮೊಹಿದ್ದೀನ್ ಇವರಿಗೆ ನೀಡಿದ್ದುದಾಗಿ ತಿಳಿಸಿದ್ದು ಸದ್ರಿಯವರು ಪಕ್ಕದ ಜಿಲ್ಲೆಯವರಾಗಿದ್ದು ಕೃತ್ಯ ನಡೆದ ಸ್ಥಳಕ್ಕೂ ಅತನ ವಾಸ್ತವ್ಯದ ಸ್ಥಳಕ್ಕೂ ಸರಿಸುಮಾರು 70 ಕಿ.ಮೀಟರಿನಷ್ಟು ಅಂತರವಿರುವುದು, ವಾಹನದ ಮಾಲೀಕರಿಗೆ ಈ ಆರೋಪಿಯ ಕುಟುಂಬದ ಸದ್ಯಸರ ಬಗ್ಗೆ ನಿಕಟ ತಿಳುವಳಿಕೆ ಇಲ್ಲದಿರುವುದು, ವಾಹನವನ್ನು ಅತನ ಉಪಯೋಗಕ್ಕೆ ನೀಡುವ ಮೊದಲು ಅವನ ಪೂರ್ವಾಪರ ತಿಳಿಯಲು ಪ್ರಯತ್ನ ಪಡದೇ ಇರುವುದು ರಕ್ಷಣಾ ಹೇಳಿಕೆಗಳಿಂದ ಸ್ಪಷ್ಟವಾಗಿದ್ದು, ವಾಹನದ ಮಾಲೀಕರು ತನ್ನ ಸ್ನೇಹಿತನೆಂದು ಹೇಳಿಕೊಂಡ ಆರೋಪಿಯೊಂದಿಗೆ ಶಾಮೀಲಾಗಿ ಈ ದಂಧೆಯಿಂದ ಬರಬಹುದಾದ ಲಾಭಾಂಶವನ್ನು ಪಡೆಯುವ ಉದ್ದೇಶದಿಂದ ಅಕ್ರಮ ಮದ್ಯಸಾರ ಸಾಗಾಣಿಕೆಗೆ ವಾಹನವನ್ನು ಬಳಸಿಕೊಂಡು ಈ ಅಪರಾಧದಲ್ಲಿ ಪಾಲ್ಗೊಂಡಿರುವುದು ಸಾಭೀತಾಗಿರುವುದರಿಂದ ಮೂರನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಮೇಲಿನ ಎಲ್ಲಾ ಕಾರಣಗಳಿಂದ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ದಿ: 10–9–2009ರಂದು ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–2 ಇವರು ಪ್ರಕರಣ ಸಂ: 15/2009–10ರಂತೆ ಅಕ್ರಮವಾಗಿ 140 ಲೀಟರು ಮದ್ಯಸಾರವನ್ನು ವಾಹನ ಸಂ: KA-03-MC-1828 ಸ್ಯಾಂಟ್ರೋ ಹುಂಡೈ ಕಾರು ಇದರಲ್ಲಿ ಸಾಗಾಟ ಮಾಡಿರುವುದು ಸಾಭೀತಾಗಿದ್ದು, ಇದು ಕರ್ನಾಟಕ ಅಬಕಾರಿ 1965ರ 13, 14ರ ಪ್ರಕಾರ ಅಪರಾಧ ಹಾಗೂ ಕಲಂ 32 ಮತ್ತು 38ಎ ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಕರ್ನಾಟಕ ಅಬಕಾರಿ ಕಾಯಿದೆ 43(ಎ)2ರಂತೆ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿ ತೀರ್ಮಾನಿಸಲಾಗಿರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

ಆದೇಶ

ಬಿ.ವಿ. ಹೂವಪ್ಪ ಗೌಡ, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ. ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ,ನಿಯಮ 43 ಬಿ ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–2ಇವರ ತಕ್ಷೀರು ಸಂ: 15/09–10, ದಿ:10–9–09 ರಲ್ಲಿ ಜಪ್ತುಪಡಿಸಿರುವ ವಾಹನ KA-03-MC-1828 ಸ್ಯಾಂಟ್ರೋ ಹುಂಡೈ ಕಾರು (ಚಾಸೀಸ್ ಸಂ: MALAC51HR3M355755 ಮತ್ತು ಇಂಜಿನ್ ಸಂ: G4HD3C33925) ಇದನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ನಿಯಮ 43 ಎ (2) ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿ: 23–04–2010ರದು ವಾಹನವನ್ನು ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ವಾಹನ ಸಂ: KA-03-MC-1828 ಸ್ಯಾಂಟ್ರೋ ಹುಂಡೈ ಕಾರನ್ನು ಈ ಆದೇಶದ 30 ದಿನಗಳ ಒಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ದಕ್ಷಿಣ ವಲಯ–2 ಇವರಲ್ಲಿ ಒಪ್ಪಿಸಲು ಆದೇಶಿಸಿದೆ.

ಮುಟ್ಟುಗೋಲು ಹಾಕಿಕೊಳ್ಳಲಾಗಿರುವ ವಾಹನವನ್ನು ಆರ್.ಸಿ ಮಾಲಿಕರು ಈ ಆದೇಶ ಹೊರಡಿಸಿದ 30 ದಿವಸಗಳೊಳಗೆ ಪ್ರಾದಿಕಾರದ ಸುಪರ್ಧಿಗೆ ಒಪ್ಪಿಸಲು ವಿಫಲರಾದಲ್ಲಿ,ಮದ್ಯಂತರ ಅದೇಶದ ಷರತ್ತುಗಳಿಗನುಗುಣವಾಗಿ ಅವರು ಈ ಪ್ರಾದಿಕಾರಕ್ಕೆ ಭದ್ರತೆಯಾಗಿ ನೀಡಲಾದ ಬ್ಯಾಂಕ್ ಗ್ಯಾರೆಂಟಿ ಸಂ: 2010/3 ದಿ:16–4–2010ನ್ನು ಇನ್‌ವೋಕ್ ಮಾಡಿಕೊಂಡು ಅಡಕವಾಗಿರುವ ಮೊತ್ತ ರೂ.57,000/–ನ್ನು ಇಲಾಖಾ ಖಾತೆಗೆ ಹೊಂದಾಣಿಕೆ ಮಾಡಿಕೊಳ್ಳಲು ಆದೇಶಿಸಿದೆ.

ಸದ್ರಿ ಪ್ರಕರಣದಲ್ಲಿ ಜಪ್ತುಪಡಿಸಲಾದ ಮದ್ಯಸಾರವನ್ನು ಈ ಪ್ರಾದಿಕಾರದ ಸಮ ಸಂಖ್ಯೆ ಅದೇಶ ದಿನಾಂಕ: 11–06–2010ರ ಅನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೊಂಡಿರುವುದನ್ನು ಸ್ಥಿರೀಕರಿಸಿದ್ದೇನೆ.

ಈ ಆದೇಶವನ್ನು ದಿ:11–08–2011ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

ಬಿ.ವಿ ಹೂವಪ್ಪ ಗೌಡ,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಅನುಬಂಧ–I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–

ಪ್ರಾ.ಸಾ– 1 : ಶ್ರೀ.ಹೆಚ್.ವಿ.ಸುರೇಶ್,ಅಬಕಾರಿ ಉಪ ನಿರೀಕ್ಷಕರು,ಮಂಗಳೂರು ದಕ್ಷಿಣ ವಲಯ–2

ಪ್ರಾ.ಸಾ–2 : ಶ್ರೀ.ಸಾಯಿ ಪ್ರಸಾದ್ ಸುವರ್ಣ,ಅಬಕಾರಿ ರಕ್ಷಕ, ಮಂಗಳೂರು ದಕ್ಷಿಣ ವಲಯ–1

ಪ್ರಾ.ಸಾ–3 : ಶ್ರೀ.ರಾಜೇಶ್ ಅಂಚನ್, ಗೃಹರಕ್ಷಕ, ಮಂಗಳೂರು ದಕ್ಷಿಣ ವಲಯ–2

ಅನುಬಂಧ–II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು:–

ನಿಶಾನೆ ಪಿ–1	:	ಮಹಜರು ಪ್ರತಿ, ನಿಶಾನೆಪಿ–1 ಎ :– ಅದರ ಮೇಲಿನ ಸಹಿ
ನಿಶಾನೆ ಪಿ–2	:	ಶೋಧನೆ ಸಮುಚಿತ ಆಧಾರ , ನಿಶಾನೆಪಿ–2 ಎ :– ಅದರ ಮೇಲಿನ ಸಹಿ
ನಿಶಾನೆ ಪಿ–3	:	ಪ್ರಥಮ ವರ್ತಮಾನ ವರದಿ ನಿಶಾನೆಪಿ–3 ಎ :– ಅದರ ಮೇಲಿನ ಸಹಿ
ನಿಶಾನೆ ಪಿ–4	:	ರಸಾಯನಿಕ ವಿಶ್ಲೇಷಣಾ ವರದಿ, ನಿಶಾನೆಪಿ–2 ಎ :– ಅದರ ಮೇಲಿನ ಸಹಿ
ನಿಶಾನೆ ಪಿ–5	:	ಮಾದರಿ ಸೀಲು, ನಿಶಾನೆಪಿ–5 ಎ :– ಅದರ ಮೇಲಿನ ಸಹಿ
ನಿಶಾನೆ ಪಿ–6	:	ಕೋರಿಕೆ ಪತ್ರ , ನಿಶಾನೆಪಿ–6 ಎ :– ಅದರ ಮೇಲಿನ ಸಹಿ
ನಿಶಾನೆ ಪಿ–7	:	ತನಿಖಾ ವರದಿ, ನಿಶಾನೆಪಿ–7 ಎ :– ಅದರ ಮೇಲಿನ ಸಹಿ

ಅನುಬಂಧ–III

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು :–

ಡಿಡಬ್ಲ್ಯೂ–1 : ಶ್ರೀ.ಅಬ್ದುಲ್ ಮಜೀದ್, ಬಿನ್:ಎನ್.ಶಂಶುದ್ದೀನ್,ವಾಸ:ಹಸೀನಾ
ಮಂಜಿಲ್, ದರ್ಗಾದ ಹತ್ತಿರ , ನ್ಯೂ ಕಾಲೋನಿ, ಕೊಡಂಕೂರು
ಅಂಬಲಪಾಡಿ ಅಂಚೆ,ಉಡುಪಿ ಜಿಲ್ಲೆ, ಉಡುಪಿ

ಅನುಬಂಧ–IV

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು :– ಇರುವುದಿಲ್ಲ–

ಬಿ.ವಿ ಹೂವಪ್ಪ ಗೌಡ,
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

ಪಿ.ಆರ್. 935

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ

ಸಂಖ್ಯೆ:ಕಾನಪ/ಎಫ್:ಎಸ್‌ಆರ್–17/2011, ದಿನಾಂಕ: 23ನೇ ಆಗಸ್ಟ್ 2011

ಅರ್ಜಿದಾರರು

1. ಶ್ರೀ ಪುಟ್ಟಸ್ವಾಮಿ ಬಿನ್ ಲಕ್ಕೇಗೌಡ
2. ಶ್ರೀಮತಿ ಯಶೋದಮ್ಮ ಕೋಂ ಪುಟ್ಟಸ್ವಾಮಿ

ವಾಸ: ಸಿ. ಹಿಂದಲಹಳ್ಳಿ ಗ್ರಾಮ, ಹಳ್ಳಿ ಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು

ಪ್ರತಿವಾದಿಗಳು

1. ಶ್ರೀ ವೈ.ಜಿ. ನಾಗರಾಜು ಬಿನ್ ಗೋವಿಂದಶೆಟ್ಟಿ, ನಂ. 79, 4ನೇ ಮುಖ್ಯರಸ್ತೆ, ಮಾರುತಿನಗರ, ವಿಜಯನಗರ, ಬೆಂಗಳೂರು–570 045
2. ಮೆ॥ ನ್ಯಾಷನಲ್ ಇನ್‌ಶೂರೆನ್ಸ್ ಕಂ. ಲಿ., ಬೆಂಗಳೂರು

ಪ್ರತಿನಿಧಿಸುವವರು : ಹಾಸನ ಶಾಖೆ

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಹೆಚ್.ಪಿ. ಧರ್ಮ ಇವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ : 18/19–11–2010ರಂದು ಅಪಘಾತ ಹೊಂದಿ ಮರಣ ಹೊಂದಿರುತ್ತಾರೆ ಎಂದು ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಮೃತರ ಅವಲಂಬಿತರು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೇ, ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಮೇಲೆ ನಿಗದಿಪಡಿಸಿದ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

ಹೆಚ್.ಎಲ್. ಗುರುಪ್ರಸಾದ್,
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ

ಪಿ.ಆರ್. 905

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದ.ಕ. ಉಪ ವಿಭಾಗ–1, ಬೆಂದೂರ್ ವೆಲ್, ಕಂಕನಾಡಿ, ಮಂಗಳೂರು– ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂ ಸಿಎ : ಸಿಆರ್–26/2011 ಎಫ್, ದಿನಾಂಕ: 18ನೇ ಆಗಸ್ಟ್, 2011.

ಅರ್ಜಿದಾರರು:

1. ಶ್ರೀಮತಿ ಗುಲಾಬಿ
2. ಕುಮಾರಿ ಶೋಭಾ
3. ಕುಮಾರಿ ಶಕುಂತಳ
4. ಮಾಸ್ಟರ್ ಚೇತನ್

ವಾಸ: 'ಕುಂಡೋಡಿ ಹೌಸ್' ಎಡಪದವು, Shibrikere Post, ಮಂಗಳೂರು–574 164

ಪ್ರತಿವಾದಿಗಳು:–

1) ದಿ. ಪ್ರೊಪ್ರೈಟರ್, ಮಂಗಳ ಇಲೆಕ್ಟ್ರಿಕಲ್ಸ್, ಕೈಕಂಬ, ಗಂಜಿಮಠ–574 144 ಮಂಗಳೂರು ದಕ್ಷಿಣ ಕನ್ನಡ

2) ದಿ ಜನರಲ್ ಮ್ಯಾನೇಜರ್, ದಿ ಓರಿಯಂಟಲ್ ಇನ್ಸುರೆನ್ಸ್ ಕಂ. ಲಿ., ಡಿವಿಜನಲ್ ಆಫೀಸ್, ಮಂಗಳೂರು

ಅಧಿಸೂಚನೆ

ಅರ್ಜಿದಾರರಾದ ಶ್ರೀಮತಿ ಗುಲಾಬಿ ಇವರು ತಮ್ಮ ಗಂಡನಾದ ಶ್ರೀ ದೊಡಗೌಡ ಇವರು 1ನೇ ಪ್ರತಿವಾದಿಗಳಾದ ಮೆ॥ ಮಂಗಳ ಇಲೆಕ್ಟ್ರಿಕಲ್ಸ್ ಕಂಟ್ರಾಕ್ಟರ್, ಇವರು ಶಿಕಾರಿಪುರದ ಗೊಗ್ಗ ಗ್ರಾಮದಲ್ಲಿ ವಿದ್ಯುತ್ ಕಂಬದಿಂದ, ವಿದ್ಯುತ್ ವಯರಿಂಗ್ ಕೆಲಸದಲ್ಲಿ (Mescom) ಇವರಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ: 24–02–2011 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೇಮು/ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಡಿ.ಜಿ. ನಾಗೇಶ್
ಕಾರ್ಮಿಕ ಅಧಿಕಾರಿ ಹಾಗೂ
ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ದ.ಕ. ಉಪ ವಿಭಾಗ–1, ಮಂಗಳೂರು.

ಪಿ.ಆರ್. 906